ಹಾರ್ದಿಕ ಶುಭಾಶಯಗಳೊಂದಿಗೆ :

**ಜಗದೀಶ್ ಮತ್ತು ವೃಂದ**

**(ಆಕಾಶವಾಣಿ ಮತ್ತು ದೂರದರ್ಶನ ಕಲಾವಿದರು)**

ಭಾವಗೀತೆ, ಜನಪದಗೀತೆ, ಭಕ್ತಿಗೀತೆ, ವಚನಗಳು ಮತ್ತು
ಹಳೆಯ ಕನ್ನಡ ಚಲನಚಿತ್ರಗೀತೆಗಳು
ಹಿರಿಯ ಮಾರಾಟ ಅಧಿಕಾರಿ, ಅಗ್ರಿಗೋಲ್ಡ್ ಫಾರಮ್ಸ್

★★★★★

ನಂ. 602, 'ಇ' ಬ್ಲಾಕ್, 10ನೇ ಮುಖ್ಯರಸ್ತೆ, 5ನೇ ಅಡ್ಡರಸ್ತೆ,
ಜೆ. ಪಿ. ನಗರ, ಮೈಸೂರು - 570 008
ದೂ : 2372377 ಮೊ : 93421 84716

***With Best Compliments From :***

**B. S. Prabhashankar**

**Chief LIC Advisor**
**2 M Club Member & MDRT Agent**

**"Sowjanya Sevakendra", Bettadapura - 571 102**
**Phone : 08223-275411, Mobile : 9449264511**

★★★★★

ಎಲ್ಐಸಿ ಪಾಲಿಸಿಗಳ ಯಾವುದೇ ರೀತಿಯ ಸೇವೆ ಅಥವಾ ಮಾಹಿತಿಗಳು ಬೇಕಾದಲ್ಲಿ
ಈ ಸೇವಾಕೇಂದ್ರದ ನೆರವು ಪಡೆಯಬಹುದು. ನಿಮ್ಮ ಮತ್ತು ನಿಮ್ಮ ಬಂಧುಗಳ
ಪಾಲಿಸಿಯ ಸೇವೆಯ ಮುಖಾಂತರ ನಮ್ಮ ನಿಮ್ಮ ಸ್ನೇಹ ಬೆಳೆಯಲಿ.
ನಿಮ್ಮ ಬೆಂಬಲ ನಮಗಿರಲಿ.

**ಸಂಕೇತಿ ವಾರ್ತಾ**

ಬೆಟ್ಟದಪುರ ಸಂಕೇತಿ ಸಂಘದ ಮಾಸಪತ್ರಿಕೆ

ಶ್ರೀ ವಿರೋಧಿನಾಮ ಸಂ॥ ವೈಶಾಖ/ಜ್ಯೇಷ್ಠ ಮಾಸ ಸಂಪುಟ - ೨೪

ಮೇ/ಜೂನ್ ೨೦೦೯ ಸಂಚಿಕೆ - ೦೫/೦೬

# Helping others is helping God

From the course of history it would appear that the majority of people have no firm and enduring view of themselves or of the reason for their life upon earth.

They can apparently be flattered or frightened or tempted into large undertakings which promise advantage but which ultimately create more powerful institutions to feed upon their lives and reduce their souls to more abject sub-servience.

If this there one lesson that we have learnt from the post-Industrial age to present-day tumultuous happenings and the turmoil of economic meltdown, it is that the decline of a civilisation begins at the point where society succeeds in suppressing the capacity of the individual to develop his or innate spiritual powers.

From that point to its collapse, the substitution of institutional authority for personal righteousness marks the fatal process by which a social order eventually loses its right to exist.

This transmutation of energy from the inner life to the outer form is the essence of materialism, the denial of the divine origin and spiritual nature of human beings?

God helps those who help themselves, is a truism. Helping others and helping oneself become two aspects of one process; service unites and the fulfilment of individual potential with the advancement of society and ensures the integrity of one's sense of moral purpose.

Properly cultivated, this sense of purpose leads to the understanding that the refinement of one's own character takes on form in concrete efforts to serve others, while service to others enhances one's intellectual and spiritual growth.

It for this reason that one of the core ac-tivities to be performed by everybody is reaching out to the society in a variety of ways, namely organising devotional prayer meetings at homes, helping with the holding of moral education classes for children in one's neighbourhood, contributing to the empowerment of junior youth (children the age-group of 12-15 years) in the community, home visits to pray for the sick and ailing, and conducting study circles focusing on the application of spiritual principles for the advancement of civilisation, as we know it.

The spirit of the age we live in stirs deep within every person of goodwill, a yearning to work for the betterment of the society.

This handful of dust, the earth, is one home. Let it be in unity.







# ಅಧ್ಯಕ್ಷ ನುಡಿ

ಅನಿವಾರ್ಯ ಕಾರಣಗಳಿಂದ ''ವಾರ್ತಾ''ದ ಹಿಂದಿನ ಸಂಚಿಕೆಗಳು ಪ್ರಕಟವಾಗಲಿಲ್ಲವಾದರೂ, ಉಂಟಾಗಿದ್ದ ತೊಡಕುಗಳ ನಿವಾರಣೆಯಲ್ಲಿ ನಮ್ಮ ಹಲವು ಬಾಂಧವರು ಆಸಕ್ತಿ ವಹಿಸಿ ಸಹಾಯ ಮಾಡಿರುವುದನ್ನು ಉಲ್ಲೇಖಿಸಿ ಕೃತಜ್ಞತೆ ಸಲ್ಲಿಸಲೇಬೇಕು. ಶ್ರೀ ಹ.ವೆಂ. ಶ್ರೀನಿವಾಸ ಅವರು ''ವಾರ್ತಾ''ದ ಪಡೆಯಬೇಕಾಗಿದ್ದ ಮಾಹಿತಿಯನ್ನು ವೆಬ್ ತಾಣದಲ್ಲಿ ''ಬೆಟ್ಟದಪುರ'' ಎಂಬ ಹೆಸರಿನಡಿಯಲ್ಲಿ ಹುಡುಕುವಂತೆ ನೀಡಿದ ಸಲಹೆ ಬಹಳ ನೆರವನ್ನು ದೊರಕಿಸಿತು. ಅವರಿಗೆ ಸಂಘದ ವಂದನೆಗಳು.

ನಮ್ಮ ಬಾಂಧವರಿಗೆಲ್ಲಾ ತಿಳಿದಿರುವಂತೆ ಪತ್ರಿಕೆಗಳು ಆರ್‌ಎನ್‌ಐ ಪರವಾನಗಿ ಪಡೆಯುವುದು ಅನಿವಾರ್ಯ. ಮುಖ್ಯವಾಗಿ ರಿಯಾಯಿತಿ ದರದಲ್ಲಿ ಅಂಚೆ ವೆಚ್ಚವನ್ನು ಭರಿಸಲು ಅನುಕೂಲವಾಗುತ್ತದೆ. ಕಳೆದ ತಿಂಗಳಿನಲ್ಲಿ ಅಂಚೆ ಕಛೇರಿಯಿಂದ ಸೂಚನೆ ಬಂದ ಪ್ರಕಾರ ಆರ್‌ಎನ್‌ಐ ಪರವಾನಗಿ ಹೊಂದದೆ ನಾವು ಮುಂದುವರಿಯುವಹಾಗಿರಲಿಲ್ಲ. ಈ ಹಿನ್ನೆಲೆಯಲ್ಲಿ ಹಿಂದಿನ ಸಂಚಿಕೆಗಳು ರವಾನೆಯಾಗಲಿಲ್ಲ. ಸುಮಾರು 20 ವರ್ಷಗಳ ಹಿಂದೆಯೇ ಆರ್‌ಎನ್‌ಐ ಪರವಾನಗಿಯನ್ನು ''ಬೆಟ್ಟದಪುರ ಸಂಕೇತಿ ವಾರ್ತಾ'' ಎಂಬ ಹೆಸರಿನಲ್ಲಿ ಪಡೆದಿದ್ದು ಅದರ ಪ್ರಮಾಣ ಪತ್ರ ನಮ್ಮ ಕಛೇರಿಯಲ್ಲಿ ದೊರಕದಿರುವ ಕಾರಣ ನಾವು ದೆಹಲಿಯಲ್ಲಿರುವ ಆರ್‌ಎನ್‌ಐ ಕಛೇರಿಯೊಡನೆ ಮತ್ತೊಂದು ಪ್ರತಿಗಾಗಿ ಪ್ರಯತ್ನಿಸುತ್ತಿದ್ದೇವೆ. ಈ ನಿಟ್ಟಿನಲ್ಲಿ ದೆಹಲಿಯಲ್ಲಿರುವ ನಮ್ಮ ಬಾಂಧವರಾದ ಶ್ರೀಯುತ ಕೆ. ಶಿವಶಂಕರ್ ಅವರು ಆಸಕ್ತಿ ವಹಿಸಿ ಪ್ರಯತ್ನ ಮುಂದುವರಿಸಿದ್ದಾರೆ. ಇವರು ಬೆಂಗಳೂರಿನ ಶ್ರೀ ಬಿ. ಎಸ್. ರಾಮಮೂರ್ತಿ ಅವರ ಭಾವಮೈದುನ.

ಈ ಪ್ರಯತ್ನ ನಡೆಯುತ್ತಿರುವಾಗಲೇ ವೆಬ್‌ಸೈಟ್‌ನಲ್ಲಿ ಬಂದಂತಹ ಒಂದು ಮಾಹಿತಿಯನ್ನು ಬೆಂಗಳೂರಿನ ಅಂಚೆ ಕಛೇರಿಗೆ ತಲುಪಿಸಿ ಅವರ ಸಮ್ಮತಿಯನ್ನು ಕೋರಿದ್ದೇವೆ. ವೆಬ್‌ಸೈಟ್‌ನಲ್ಲಿ ಮಾಹಿತಿ ಇರುವುದರಿಂದ ದೆಹಲಿಯಿಂದ ಪ್ರತಿ ದೊರಕುವವರೆಗೂ ರಿಯಾಯಿತಿ ದರದಲ್ಲಿ ''ವಾರ್ತಾ''ವನ್ನು ರವಾನಿಸಲು ಕೋರಿಕೆಯನ್ನು ಇಟ್ಟಿದ್ದೆವು. ನಮ್ಮ ಕೋರಿಕೆಯನ್ನು ಮನ್ನಿಸಿ ಅಂಚೆ ಇಲಾಖೆಯವರು 3 ತಿಂಗಳವರೆಗೆ ಅವಕಾಶವನ್ನು ನೀಡಿರುತ್ತಾರೆ. ಇದು ಒಂದು ಸಂತೋಷದ ವಿಷಯ.

ಈ ನಿಟ್ಟಿನಲ್ಲಿ ನಮಗೆ ಸಹಾಯ ಮಾಡಿದ ನಮ್ಮ ಬಾಂಧವರಾದ ಆರ್. ಎಸ್. ಭಾಸ್ಕರ ಅವಧಾನಿ ಅವರ ಮುತುವರ್ಜಿಯನ್ನು ನಾವು ಹಾರ್ದಿಕವಾಗಿ ನೆನೆಯುತ್ತೇವೆ. ಒಟ್ಟಿನಲ್ಲಿ ಸಹೃದಯ ಬಾಂಧವರ ಸಹಕಾರದಿಂದ ''ವಾರ್ತಾ'' ಅಡಚಣೆಯಿಲ್ಲದೆ ನಿಮ್ಮ ಕೈಸೇರಲಿ ಎಂಬುದೇ ನಮ್ಮ ಆಶಯ.

ಇದೇ ಸಂದರ್ಭದಲ್ಲಿ ''ವಾರ್ತಾ'' ಎರಡು ತಿಂಗಳಿನಿಂದ ತಮಗೆ ತಲುಪದೇ ಇರುವುದನ್ನು ಗಮನಿಸಿ ಅನೇಕ ಬಾಂಧವರು ಇದರಬಗ್ಗೆ ದೂರವಾಣಿಯ ಮೂಲಕ ವಿಚಾರಿಸಿ ತಮ್ಮ ಆಸಕ್ತಿಯನ್ನು ವ್ಯಕ್ತಪಡಿಸಿದ್ದಾರೆ. ಇವರ ಆಸಕ್ತಿಗಾಗಿ ಸಂಘವು ಸಂತೋಷಪಟ್ಟಿದೆ.

ಬಾಂಧವರ ಸಹಾಯವನ್ನು ಸ್ಮರಿಸುವ ಇನ್ನೊಂದು ಸಂದರ್ಭವೂ ಇದೆ. ಮೈಸೂರಿನಲ್ಲಿರುವ ಸಂಘದ ಆಸ್ತಿಯು ಯಾವರೀತಿ ಸಂಘದ ಸ್ವಾಮ್ಯಕ್ಕೆ ಸೇರಿದೆ ಎಂಬುದರ ಬಗ್ಗೆ ಖಚಿತ ದಾಖಲೆ ಸಿಕ್ಕಿರಲಿಲ್ಲ. ಈಗ ಡಾ|| ಹೆಚ್.ಎನ್.ಸುರೇಶ್ ಅವರ ತೀವ್ರ ಆಸಕ್ತಿ ಮತ್ತು ಓಡಾಟದಿಂದ, ಅದು **1956ರಲ್ಲಿ ದಿ|| ಎಸ್.ರಾಮಸ್ವಾಮಿ ಅವರ ನೇತೃತ್ವದಲ್ಲಿ ಅಂದಿನ ಮೈಸೂರಿನ ಸಿಐಟಿಬಿಯ ಮುಖಾಂತರ ಉಚಿತ ಕೊಡುಗೆಯಾಗಿ ಬಂದಿದೆ. ಈ ದಿಸೆಯಲ್ಲಿ ಕೆಲವು ದಾಖಲೆಗಳನ್ನು ನೀಡುವುದರ ಮೂಲಕ ಸಹಾಯ ಮಾಡಿದ ದಿ|| ಎಸ್. ರಾಮಸ್ವಾಮಿ ಅವರ ಪುತ್ರರಾದ ಶ್ರೀಯುತ ಎಸ್. ಆರ್. ಸುಬ್ಬರಾವ್ ಮತ್ತು ಶ್ರೀ ಸೋಮಶೇಖರ್ ಅವರುಗಳಿಗೆ ಸಂಘವು ಆಭಾರಿಯಾಗಿರುತ್ತದೆ. ಇದೊಂದು ನೆಮ್ಮದಿ ತಂದ ವಿಷಯವಾಗಿದ್ದು ಡಾ|| ಹೆಚ್.ಎನ್. ಸುರೇಶ್ ಅವರಿಗೆ ಸಂಘದ ಕೃತಜ್ಞತೆಗಳು.**

ಈ ಬಾರಿಯ ಅನೇಕ ಪಬ್ಲಿಕ್ ಪರೀಕ್ಷೆಗಳ ಫಲಿತಾಂಶ ಪ್ರಕಟವಾಗಿದ್ದು ಎಂದಿನಂತೆ ಸಂಕೇತಿ ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಎಲ್ಲರಿಗೂ ಸಂಘದ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತಲೇ ಉತ್ತಮ ಅಂಕಗಳನ್ನು ಪಡೆದ ವಿದ್ಯಾರ್ಥಿಗಳ ಸ್ವವಿವರಗಳನ್ನೊಳಗೊಂಡ ಭಾವಚಿತ್ರಗಳನ್ನು ಸಂಘಕ್ಕೆ ಕಳುಹಿಸಿ ಎಂದು ಕೇಳಿಕೊಳ್ಳುತ್ತೇನೆ. ಬರುವ ಸಂಚಿಕೆಗಳಲ್ಲಿ ಅವುಗಳನ್ನು ಪ್ರಕಟಿಸಲಾಗುವುದು.

– ಎಂ. ನರಸಿಂಹನ್







# ಕಾರ್ಯದರ್ಶಿ ಕಾಲಂ

ಸನ್ಮಾನ್ಯ ಸಂಕೇತಿ ಬಂಧುಗಳೆ, ಒಂದೆರಡು ತಿಂಗಳಿಂದ ಕೆಲವು ಅನಿವಾರ್ಯಕಾರಣಗಳಿಂದಾಗಿ ವಾರ್ತಾ ನಿಮ್ಮ ಕೈಸೇರಲಿಲ್ಲ. ಅದಕ್ಕಾಗಿ ನಿಮ್ಮ ಕ್ಷಮೆ ಕೋರುತ್ತಾ ಈ ಕಾಲಂ ಬರೆಯುತ್ತಿದ್ದೇನೆ.

ಸಂಕೇತಿಗಳು ಸ್ವಾಭಿಮಾನಿಗಳು, ಯಾವುದೇ ಅನುಕುಂಪ, ದಾಕ್ಷಿಣ್ಯವನ್ನು ಅದು ಅತ್ಯಂತ ಅವಶ್ಯಕವಾಗುವವರೆಗೆ ಪಡೆಯಲು ಇಷ್ಟಪಡುವುದಿಲ್ಲ. ಹಾಗೆಯೇ, ಅದರ ಅವಶ್ಯಕತೆ ಇಲ್ಲ ಎನಿಸಿದರೆ ತತ್‌ಕ್ಷಣವೇ ವಿನಯದಿಂದ ಅದನ್ನು ನಿರಾಕರಿಸಿಯೂಬಿಡುತ್ತಾರೆ. ಇದರಲ್ಲಿ ಒಂದು – ಸ್ವಾಭಿಮಾನವನ್ನು ನಾವು ಕಾಣಬಹುದು. ಎರಡು – ಅವಶ್ಯಕತೆಯಿರುವ ಬೇರೆಯವರಿಗೆ ಈ ಸಹಾಯ ಸಿಗಲಿ ಎಂಬ ಹಿರಿತನವೂ ಹೌದು. ಇಂಥಾ ಒಂದು ವಿಶೇಷ ಗುಣವನ್ನು ತೋರಿಸಿರುವವರು ಶ್ರೀಮತಿ ಎಸ್. ಕೆ. ಅನಂತಲಕ್ಷ್ಮಿ ಮತ್ತು ಅವರ ಪುತ್ರ ಶ್ರೀ ಆರ್. ಎಸ್. ಶ್ರೀನಿವಾಸರವರು. ಈ ಇಬ್ಬರು ಸಂಘದಿಂದ ಮಾಸಾಶನವನ್ನು ಪಡೆಯುತ್ತಿದ್ದು, ಈಗ ಶ್ರೀಮತಿ ಅನಂತಲಕ್ಷ್ಮಿಯವರ ಪೌತ್ರ ಶ್ರೀನಿವಾಸರವರ ಪುತ್ರ, ಶ್ರೀ ಆರ್. ಎಸ್. ಶಾಮಸುಂದರರವರು ಸ್ವಂತ ಕಾಲುಗಳ ಮೇಲೆ ನಿಂತಿದ್ದು, ಒಳ್ಳೆಯ ವೃತ್ತಿಯಲ್ಲಿ ಇರುವುದರಿಂದ ಇನ್ನುಮೇಲೆ ಮಾಸಾಶನವನ್ನು ಕೊಡುವುದು ಬೇಡವೆಂದು ತಿಳಿಸಿರುತ್ತಾರೆ. ಮೂರು ತಲೆಮಾರಿನ ಈ ಮೂರೂ ಜನ ಅಜ್ಜಿ, ಮಗ, ಮೊಮ್ಮಗ ಈ ನಿರ್ಧಾರದಿಂದ ಒಳ್ಳೆಯ ಆದರ್ಶವನ್ನು ಮೆರೆದಿರುತ್ತಾರೆ. ಸಂಘವು ಈ ಮೂವರಿಗೂ ಸುಖ, ಶಾಂತಿ, ಆಯುರಾರೋಗ್ಯ ಐಶ್ವರ್ಯಾದಿಗಳನ್ನು ಭಗವಂತನು ಯಥೇಚ್ಛವಾಗಿ ಕರುಣಿಸಲಿ ಎಂದು ಹಾರೈಸುತ್ತದೆ.

ನಮ್ಮ ಸಂಘಕ್ಕೆ ಯಾವುದೇ ನಿರ್ಧಾರಿತ, ನಿಯತ ಕಾಲಾವಧಿಯ ಆದಾಯವಿಲ್ಲದಿದ್ದರೂ ಹಲವಾರು ಸಾಮಾಜಿಕ ಸೇವಾ ಕಾರ್ಯಗಳನ್ನು ನಡೆಸಿಕೊಂಡು ಬರುತ್ತಲೇ ಇದೆ. ಇದಕ್ಕೆ ಮೂಲ ಕಾರಣ ನಮ್ಮ ಸಮಾಜದ ದಾನಿಗಳ ಶ್ರೀರಕ್ಷೆ. ಅನ್ನದಾನ ನಿಧಿಯಾಗಲಿ, ವೃದ್ಧಾಶ್ರಮದ ಕಟ್ಟಡವಾಗಲಿ, ಬಹಳ ಕಳಕಳಿಯಿಂದ ನಮ್ಮ ಕರೆಗೆ ಸಾಕಷ್ಟು ಧನ ಸಹಾಯವನ್ನೂ ಮಾಡುತ್ತಿರುವ ನಮ್ಮ ಬಂಧುಗಳಿಗೆ ಸಂಘವು ಎಷ್ಟು ಕೃತಜ್ಞತೆಗಳನ್ನು ಹೇಳಿದರೂ ಸಾಲದು. ಇಂಥ ಮಹನೀಯರಲ್ಲಿ ಒಬ್ಬರು ನಮ್ಮ ಶ್ರೀ ಆರ್. ಶಿವಶಂಕರರವರು. ಶ್ರೀಯುತರು

**ಸನ್ಮಾನ್ಯ ಶ್ರೀ ದಿ|| ಆರ್. ಟಿ. ರಾಮಚಂದ್ರ ಮತ್ತು ದಿ|| ಶ್ರೀಮತಿ ಸೀತಮ್ಮ ಇವರ ಸುಪುತ್ರರು, ಹಾಲಿ ಯುಎಸ್‌ಎನಲ್ಲಿ ವಾಸವಾಗಿರುತ್ತಾರೆ. ಶ್ರೀಯುತರು ನಮ್ಮ ಅಶಕ್ತ ಮಾಸಾಶನ, ವೈದ್ಯಕೀಯ ಸಹಾಯ, ಅನ್ನದಾನ, ವಾರ್ತಾ ಜಾಹೀರಾತು ಹೀಗೆ ನಮ್ಮ ಎಲ್ಲಾ ಕಾರ್ಯಕ್ರಮಗಳಿಗೂ ಸಹಾಯವಾಗುವಂತೆ 3400/- ಡಾಲರ್‌ಗಳನ್ನು ಅವರ ಧರ್ಮ ಪತ್ನಿ ಶ್ರೀಮತಿ ವೈದೇಹಿ ಶಿವಶಂಕರ್ ಮತ್ತು ತಂದೆ ತಾಯಿಯರ ನೆನಪಿನಲ್ಲಿ ಕೊಡುಗೆಯಾಗಿ ನೀಡಿರುತ್ತಾರೆ. ಶ್ರೀಯುತರಿಗೂ ಸಂಘವು ಆಭಾರಿಯಾಗಿದ್ದು, ಶ್ರೀಯುತರಿಗೆ ದೇವರು ಆಯುರಾರೋಗ್ಯ ಐಶ್ವರ್ಯಾದಿಗಳನ್ನು ಯಥೇಚ್ಛವಾಗಿ ನೀಡಲಿ ಎಂದು ಹಾರೈಸುತ್ತದೆ.**

**- ಎಸ್. ಸಿ. ಮಂಜುನಾಥ್**

## *Change of Address*

**R. S. Srinatha Babu**
**Vijayalakshmi**
No. 305, 'Vijayasree', Sapthagiri Residency - V
3rd Floor, Opp. Govt. School, Kathriguppa
Bangalore - 560 085

**B. R. Balamukund**
**Asha**
No. 515/1, 'Sapthagiri', 17th Main, 9th Cross,
Muneshwara Block, Bangalore - 560 026
Ph : 9980758966

**H. V. Dinesh Prasad**
**Bharathi**
**Parvathamma**
No. 245, 3rd Cross, C. T. Bed,
Thyagarajanagar, Bangalore - 560 028
Ph : 93792 44003, 94484 47747





# ಯಜುರುಪಾಕರ್ಮ

## ಬೆಂಗಳೂರು ಶಾಖೆ

ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಬೆಂಗಳೂರು ಶಾಖೆಯ ಆಶ್ರಯದಲ್ಲಿ **ಶ್ರಾವಣ ಶುಕ್ಲ ಪೂರ್ಣಿಮೆ ದಿನಾಂಕ 05.08.2009 ಬುಧವಾರ ಬೆಳಿಗ್ಗೆ 9.00 ಘಂಟೆಗೆ** ಶ್ರೀ ಎಂ. ನರಸಿಂಹನ್‌ರವರ ನೇತೃತ್ವದಲ್ಲಿ ಯಜುರುಪಾಕರ್ಮವನ್ನು ಏರ್ಪಡಿಸಲಾಗಿದೆ. ಎಲ್ಲಾ ಆಸ್ತಿಕ ಮಹಾಶಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಕೋರಲಾಗಿದೆ.

ಉಪಾಕರ್ಮ ಮುಗಿದನಂತರ ಎಲ್ಲರಿಗೂ ಕಾಫಿ ಮತ್ತು ಭೋಜನದ ವ್ಯವಸ್ಥೆ ಏರ್ಪಡಿಸಿದೆ.

**ಸ್ಥಳ :** **ವಿದ್ಯಾವಿಹಾರ** (ಚಂದ್ರಶೇಖರ ಭಾರತೀ ಕಲ್ಯಾಣ ಮಂಟಪದ ಆವರಣ)
ಪಂಪಮಹಾಕವಿ ರಸ್ತೆ, ಶಂಕರಪುರಂ, ಬೆಂಗಳೂರು - 560 004.

**ಸಮಯ : ಪ್ರಾತಃ 9.00 ಘಂಟೆಗೆ**

| | |
|---|---|
| **ಆರ್.ಎಸ್. ಶ್ರೀನಿವಾಸಯ್ಯ** | **ಬಿ. ಆರ್. ನರಸಿಂಹ ಮೂರ್ತಿ** |
| ಅಧ್ಯಕ್ಷರು | ಗೌ|| ಕಾರ್ಯದರ್ಶಿ |
| ದೂ : 41258996 | ದೂ : 26711031 |

## ಮೈಸೂರು ಶಾಖೆ

ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಮೈಸೂರು ಶಾಖೆಯ ಆಶ್ರಯದಲ್ಲಿ **ಶ್ರಾವಣ ಶುಕ್ಲ ಪೂರ್ಣಿಮೆ ದಿನಾಂಕ 05.08.2009 ಬುಧವಾರ ಬೆಳಿಗ್ಗೆ 9.00 ಘಂಟೆಗೆ** ಯಜುರುಪಾಕರ್ಮವನ್ನು ಏರ್ಪಡಿಸಲಾಗಿದೆ.

ಎಲ್ಲಾ ಆಸ್ತಿಕ ಮಹಾಶಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಕೋರಲಾಗಿದೆ.

**ಸ್ಥಳ : ಸಂಕೇತಿ ಸಂಘದ ಸಭಾಂಗಣ**

**ಹೆಚ್. ಎಸ್. ಶ್ರೀಧರ ಮೂರ್ತಿ**
ಅಧ್ಯಕ್ಷರು

# ಶುಭ ಸಮಾಚಾರಗಳು

## ಗೃಹಪ್ರವೇಶ :

| ತಾರೀಖು | |
|---|---|
| 01.05.09 | **ಶ್ರೀಮತಿ ಸುಧಾ ಮತ್ತು ಶ್ರೀ ಆರ್. ಎಲ್. ಜಗದೀಶ್** |
| ಮೈಸೂರು | (ಶ್ರೀಮತಿ ಸಾವಿತ್ರಮ್ಮ ಮತ್ತು ದಿ|| ಕಣಿವೆ ರಾಮಸ್ವಾಮಿ ಅವರ ಪುತ್ರ) |
| 31.05.09 | **ಶ್ರೀಮತಿ ವೀಣಾ ಮತ್ತು ಶ್ರೀ ಹೆಚ್. ಎಸ್. ಕಪಾಲೇಶ್ವರ್,** |
| ಬೆಂಗಳೂರು | (ಶ್ರೀಮತಿ ಹೆಚ್. ಎಸ್. ಶಾರದಮ್ಮ ಮತ್ತು ದಿ|| ಹೆಚ್. ಎಸ್. ಶಿವಶಂಕರ್ ಅವರ ಪುತ್ರ), ಎನ್.ಆರ್.ಕಾಲೋನಿ |
| 12.06.09 | **ಶ್ರೀಮತಿ ವಿಜಯಲಕ್ಷ್ಮೀ ಮತ್ತು ಶ್ರೀನಾಥ ಬಾಬು** |
| ಬೆಂಗಳೂರು | (ಕತ್ತರಿಗುಪ್ಪ) |
| 24.06.09 | **ಶ್ರೀಮತಿ ರತ್ನಾ ಮತ್ತು ಶ್ರೀ ಆರ್.ಎನ್.ಶ್ರೀನಿವಾಸ** |
| ಮೈಸೂರು | (ಸಂಘದ ಹಾಲಿ ಉಪಾಧ್ಯಕ್ಷೆ ಶ್ರೀಮತಿ ವಸಂತಲಕ್ಷ್ಮೀ ಮತ್ತು ಶ್ರೀ ಬಿ. ಎಸ್. ನಾರಾಯಣಸ್ವಾಮಿ ಅವರ ಪುತ್ರ) |

## ಚೂಡಾಕರ್ಮ :

| ತಾರೀಖು | ವಟು |
|---|---|
| 27.04.09 | **ಚಿ|| ತರುಣ್** |
| ಬೆಂಗಳೂರು | (ಶ್ರೀಮತಿ ದೀಪ್ತಿ ಮತ್ತು ಶ್ರೀ ಕೆ. ಎನ್. ಸತ್ಯಪ್ರಕಾಶ್ ಅವರ ಪುತ್ರ ಹಾಗೂ ಶ್ರೀಮತಿ ಪ್ರಭಾವತಿ ಮತ್ತು ಶ್ರೀ ಆರ್.ಕೆ.ಶ್ರೀನಿವಾಸಮೂರ್ತಿ ಹಾಗೂ ಶ್ರೀಮತಿ ಸುಬ್ಬಲಕ್ಷ್ಮಿ ಮತ್ತು ಶ್ರೀ ಕೆ. ನರಸಿಂಹ ಮೂರ್ತಿ ಅವರ ಮೊಮ್ಮಗ) |
| 06.05.09 | **ಚಿ|| ಶ್ರೀಹರಿ ಆತ್ರೇಯ್** |
| ಮೈಸೂರು | (ಶ್ರೀಮತಿ ಗೀತಾ ಮತ್ತು ಶ್ರೀ ಹೆಚ್.ಎಸ್. ನಾಗರಾಜ್ ಅವರ ಪುತ್ರ ಹಾಗೂ ಶ್ರೀಮತಿ ಸರಸ್ವತಮ್ಮ ಮತ್ತು ದಿ|| ಹೆಬ್ಬಾರ್ ಶ್ರೀನಿವಾಸಯ್ಯ ಅವರ ಮೊಮ್ಮಗ) |





## ಉಪನಯನ :

| ತಾರೀಖು | ವಟು |
|---|---|
| 19.04.09 | **ಚಿ|| ಆರ್. ಬಿ. ಸುದರ್ಶನ್** |
| ಬೆಂಗಳೂರು | (ಶ್ರೀಮತಿ ಆಶಾ ಮತ್ತು ಶ್ರೀ ಹೆಚ್. ಆರ್. ಬಾಲಕೃಷ್ಣ ಅವರ ಪುತ್ರ ಹಾಗೂ ಶ್ರೀಮತಿ ಶಾಂತಾ ಮತ್ತು ಶ್ರೀ ಎಂ.ಎಸ್. ರಾಮಚಂದ್ರರಾವ್ ಅವರ ಮೊಮ್ಮಗ) |
| 30.04.09 | **ಚಿ|| ಶ್ರೇಯಸ್ ಡಿ. ಸಾಮಗ** |
| ಬೆಂಗಳೂರು | (ಶ್ರೀಮತಿ ಶ್ರೀಕಲಾ ಮತ್ತು ಡಿ. ನಾಗಭೂಷಣ ಡಿ. ಸಾಮಗ ಅವರ ಪುತ್ರ ಹಾಗೂ ಶ್ರೀಮತಿ ಲಕ್ಷ್ಮೀ ಮತ್ತು ಶ್ರೀ ಆರ್. ಎಸ್. ಶ್ರೀನಿವಾಸ ಮೂರ್ತಿ ಹಾಗೂ ಶ್ರೀಮತಿ ಮತ್ತು ಶ್ರೀ ಎಸ್. ದತ್ತಾತ್ರಿ ಅವರ ಮೊಮ್ಮಗ) |
| 01.05.09 | **ಚಿ|| ಪ್ರದೀಪ್ ಸುಬ್ರಹ್ಮಣ್ಯ** |
| ತಿರುಮಲ | (ಶ್ರೀಮತಿ ಮಂಜುಳಾ ಸುಬ್ರಹ್ಮಣ್ಯ ಅವರ ಪುತ್ರ) |
| 01.05.09 | **ಚಿ|| ಮನೋಜ್** |
| ಬೆಂಗಳೂರು | (ಶ್ರೀಮತಿ ಲಕ್ಷ್ಮೀ ಮತ್ತು ಶ್ರೀ ಅರುಣ್ ಕುಮಾರ್ ಎಂ. ಎಸ್. ಅವರ ಪುತ್ರ ಹಾಗೂ ಶ್ರೀಮತಿ ವಸಂತಮಾಲಾ ಮತ್ತು ಶ್ರೀನಿವಾಸಮೂರ್ತಿ ಎಂ. ಎಸ್. ಅವರ ಹಾಗೂ ಶ್ರೀಮತಿ ಯಶೋದಾ ಮತ್ತು ದಿ|| ಮಾರ್ಕಂಡೇಯ ಅವರ ಮೊಮ್ಮಗ) |
| 01.05.09 | **ಚಿ|| ಆರ್. ಎಂ. ರಾಮಕೃಷ್ಣ** |
| ಬೆಂಗಳೂರು | (ಶ್ರೀಮತಿ ಅಂಬುಜ ಮಹೇಂದ್ರ ಮತ್ತು ಶ್ರೀ ಸಿ. ಮಹೇಂದ್ರ ಅವರ ಪುತ್ರ ಹಾಗೂ ಶ್ರೀಮತಿ ಶಕುಂತಲಾ ಮತ್ತು ಡಾ|| ಚಂದ್ರಹಾಸ ಅವರ ಮೊಮ್ಮಗ) |
| 10.05.09 | **ಚಿ|| ಬಿ. ಎಸ್. ಸುಕೃತ್ (ಹೇಮಂತ್)** |
| ಬೆಂಗಳೂರು | (ಶ್ರೀಮತಿ ನಿರ್ಮಲಾ ಮತ್ತು ಶ್ರೀ ಬಿ. ಎಸ್. ಸುರೇಶ್‌ಕುಮಾರ್ ಅವರ ಪುತ್ರ) |
| 11.05.09 | **ಚಿ|| ಕೈಲಾಶ್ ಶಂಕರ್ ಹನಸೋಗೆ** |
| ಬೆಂಗಳೂರು | (ಶ್ರೀಮತಿ ಭಾರ್ಗವಿ ಮತ್ತು ಶ್ರೀ ಕುಮಾರ್ ಹೆಚ್.ಎಸ್. ಅವರ ಪುತ್ರ ಹಾಗೂ ದಿ|| ಇಂದಿರಾ ಮತ್ತು ದಿ|| ಹೆಚ್.ವಿ.ಸುಬ್ಬನರಸಿಂಹಯ್ಯ ಅವರ ಮೊಮ್ಮಗ) |

| ತಾರೀಖು | ವಟು |
|---|---|
| 21.05.09 | **ಚಿ॥ ರಾಜ್‌ಕಿರಣ್ ದತ್ತ** |
| ಬೆಂಗಳೂರು | (ಶ್ರೀಮತಿ ಜಯಶ್ರೀ ರಾಜನ್ ಮತ್ತು ಶ್ರೀ ರಾಜನ್ ದತ್ತ ಅವರ ಪುತ್ರ) |
| 28.05.09 | **ಚಿ॥ ರೋಹಿತ್. ಎಸ್. ಕೌಶಿಕ್** |
| ಬೆಂಗಳೂರು | (ಶ್ರೀಮತಿ ಚಂದ್ರಿಕಾ ಮತ್ತು ಶ್ರೀ ಎಸ್. ಶ್ರೀರಾಮ್ ಅವರ ಪುತ್ರ ಹಾಗೂ ದಿ॥ ಸುಮಿತ್ರಾಬಾಯಿ ಮತ್ತು ದಿ॥ ಪಿ. ಎನ್. ಸುಬ್ರಹ್ಮಣ್ಯ ಅವರ ಮೊಮ್ಮಗ) |
| 10.06.09 | **ಚಿ॥ ಶ್ರೇಯಸ್ ಗೌರವ್** |
| ಬೆಂಗಳೂರು | ಶ್ರೀಮತಿ ಆರತಿ ಮತ್ತು ಶ್ರೀ ಎಸ್. ಎಂ. ಶ್ಯಾಮಪ್ರಸಾದ್ ಅವರ ಪುತ್ರ ಹಾಗೂ ಶ್ರೀಮತಿ ಸೀತಮ್ಮ ಮತ್ತು ದಿ॥ ಎಸ್. ಮುಕುಂದರಾವ್ ಅವರ ಮೊಮ್ಮಗ ಹಾಗೂ ಶ್ರೀಮತಿ ಎಸ್. ಕೆ. ಅನಂತಲಕ್ಷ್ಮೀ ಅವರ ಮರಿಮಗ) |
| 12.06.09 | **ಚಿ॥ ಎಸ್. ಆರ್. ಸುಮುಖ** |
| ಮೈಸೂರು | (ಶ್ರೀಮತಿ ಸೌಮ್ಯಾ ಮತ್ತು ಶ್ರೀ ಎಸ್. ಕೆ. ರಘುರಾಂ ಅವರ ಪುತ್ರ ಹಾಗೂ ಶ್ರೀಮತಿ ಚಂದ್ರಸೇನೆ ಮತ್ತು ಶ್ರೀ ಕೃಷ್ಣಮೂರ್ತಿ ಅವರ ಮೊಮ್ಮಗ) |
| 18.06.09 | **ಚಿ॥ ಅಭಿಜಿತ್** |
| ಬೆಂಗಳೂರು | (ಶ್ರೀಮತಿ ಗೌರಿ ಮತ್ತು ದಿ॥ ಶಶೀಂದ್ರ ಆರ್. ವಿ. ಅವರ ಪುತ್ರ ಹಾಗೂ ಮೈಸೂರಿನ ಶ್ರೀಮತಿ ಶಾಂತಾ ಮತ್ತು ಶ್ರೀ ಆರ್. ವಿಶ್ವೇಶ್ವರಯ್ಯ ಅವರ ಮೊಮ್ಮಗ) |
| 25.06.09 | **ಚಿ॥ ವಿಜೇತ** |
| ಮೈಸೂರು | (ಶ್ರೀಮತಿ ಪದ್ಮಿನಿ ಮತ್ತು ಶ್ರೀ ಬಿ. ಕೆ. ವಿಶ್ವನಾಥ ಅವರ ಪುತ್ರ ಹಾಗೂ ಶ್ರೀಮತಿ ಚಂದ್ರಸೇನೆ ಮತ್ತು ಶ್ರೀ ಕೃಷ್ಣಮೂರ್ತಿ ಅವರ ಮೊಮ್ಮಗ) |
| 25.06.09 | **ಚಿ॥ ಹೆಚ್. ಎಸ್. ರಜತ್** |
| ಬೆಂಗಳೂರು | (ಶ್ರೀಮತಿ ರೇಖಾ ಮತ್ತು ಶ್ರೀ ಹೆಚ್. ಸಿ. ಸುದರ್ಶನ್ ಅವರ ಪುತ್ರ ಹಾಗೂ ಶ್ರೀಮತಿ ಪ್ರಭಾ ಮತ್ತು ದಿ॥ ಚಂದ್ರಶೇಖರ್ ಮತ್ತು ಶ್ರೀಮತಿ ಜಯಶ್ರೀ ಮತ್ತು ಶ್ರೀ ಆರ್. ವಿ. ಶ್ರೀಕಂಠಯ್ಯ ಅವರ ಮೊಮ್ಮಗ) |





## ವಿವಾಹ ಮಹೋತ್ಸವ :

| ತಾರೀಖು | ವರ | ವಧು |
|---|---|---|
| 16.04.09 | **ಚಿ॥ರಾ॥ ಅರುಣ್. ಎಲ್.** | **ಹ॥ಕುಂ॥ಶೋ॥ ರೇಖಾ. ಎಸ್.ಕೆ.** |
| ಹೊಳೆನರ್ಸೀಪುರ | (ಶ್ರೀಮತಿ ಹೆಚ್.ಕೆ.ಬಾಲಸರಸ್ವತಿ ಮತ್ತು ದಿ॥ ಲಕ್ಷ್ಮೀನರಸಿಂಹಯ್ಯ ಅವರ ಪುತ್ರ) | (ಶ್ರೀಮತಿ ನಿರ್ಮಲಾ ಕೃಷ್ಣಸ್ವಾಮಿ, ಶೀಗವಾಳು ಅವರ ಪುತ್ರಿ) |
| 27.04.09 | **ಚಿ॥ ರಾ॥ ಹರ್ಷ** | **ಚಿ॥ಸೌ॥ಹ॥ಕುಂ॥ಶೋ॥ ಶ್ವೇತಾ** |
| ಬೆಂಗಳೂರು | (ಶ್ರೀಮತಿ ಲೀಲಾವತಿ ಮತ್ತು ಮೋದೂರ್ ಸತ್ಯೇಂದ್ರ (ಯುಎಸ್ಎ) ಅವರ ಪುತ್ರ) | (ಶ್ರೀಮತಿ ಶೀಲಾ ಮತ್ತು ಶ್ರೀ ರಮೇಶ್ ಹರವೆ ಅವರ ಪುತ್ರಿ) |
| 01.05.09 | **ಚಿ॥ ರಾ॥ ಅಭಿರಾಮ್** | **ಚಿ॥ಸೌ॥ಹ॥ಕುಂ॥ಶೋ॥ ಕೃತ್ತಿಕಾ** |
| ಬೆಂಗಳೂರು | (ಶ್ರೀಮತಿ ಶೈಲಜ ಮತ್ತು ಶ್ರೀ ಹೆಚ್. ಆರ್. ಕೃಷ್ಣಕುಮಾರ್ ಅವರ ಪುತ್ರ ಹಾಗೂ ಶ್ರೀಮತಿ ಸಾವಿತ್ರಮ್ಮ ಮತ್ತು ದಿ॥ ರಾಮಣ್ಣನವರ ಮೊಮ್ಮಗ) | (ಶ್ರೀಮತಿ ಲತಾ ಮತ್ತು ಶ್ರೀ ಬಿ. ವಿ. ಉಮೇಶ್ ಅವರ ಪುತ್ರಿ) |
| 04.05.09 | **ಚಿ॥ ರಾ॥ ರೋಹಿತ್ ನಲ್ಲಪೇಟ** | **ಚಿ॥ಸೌ॥ಹ॥ಕುಂ॥ಶೋ॥ ಸುಷ್ಮಾ ಜಹಗೀರಿ** |
| ಬೆಂಗಳೂರು | (ಶ್ರೀಮತಿ ಪ್ರಭಾ ಮತ್ತು ಶ್ರೀ ಎನ್. ಆರ್. ಶಶಿಕುಮಾರ್ ಅವರ ಪುತ್ರ) | (ದಿ॥ ಬಿ.ಎನ್.ಲೀಲಾ ಮತ್ತು ಶ್ರೀ ಆರ್.ಎಸ್.ಶ್ರೀನಿವಾಸಯ್ಯ ಅವರ ಪುತ್ರಿ ಹಾಗೂ ಶ್ರೀಮತಿ ನಾಗಮ್ಮ ಮತ್ತು ದಿ॥ ಜಹಗೀರಿ ಆರ್.ಜಿ. ಸುಬ್ಬರಾಯರ ಮೊಮ್ಮಗ) |
| 06.05.09 | **ಚಿ॥ರಾ॥ ರಾಕೇಶ್. ಪಿ. ನಾಯಕ್** | **ಚಿ॥ಸೌ॥ ರಿಯಾ ಧೂರ್ಜಟಿ(ಪೂರ್ಣಿಮಾ)** |
| ಬೆಂಗಳೂರು | (ಶ್ರೀಮತಿ ಪದ್ಮಿನಿ ಮತ್ತು ಶ್ರೀ ಎ. ಪ್ರೇಮ್‌ಚಂದ್ ಅವರ ಪುತ್ರ) | (ಶ್ರೀಮತಿ ರಾಜೇಶ್ವರಿ ಮತ್ತು ದಿ॥ ಧೂರ್ಜಟಿ ಹೆಚ್.ಎಸ್. ಅವರ ಪುತ್ರಿ ಮತ್ತು ಶ್ರೀಮತಿ ಹೆಚ್.ಎಸ್. ಶಾರದಮ್ಮ ಮತ್ತು ದಿ॥ ಹೆಚ್.ಎಸ್. ಶಿವಶಂಕರ್ ಅವರ ಮೊಮ್ಮಗಳು) |

| ತಾರೀಖು | ವರ | ವಧು |
|---|---|---|
| 20.05.09 | **ಚಿ॥ ರಾ॥ ಎಸ್. ಮಂಜುನಾಥ್**<br>(ದೀಪಕ್ ನರಸಿಂಹನ್)<br>(ಶ್ರೀಮತಿ ನಳಿನಿ ಮತ್ತು ಶ್ರೀ ಎನ್.ಶಂಕರನಾರಾಯಣ ಅವರ ಪುತ್ರ) | **ಚಿ॥ಸೌ॥ಹ॥ಕುಂ॥ಶೋ॥ ವಲ್ಲಭಿ**<br>(ಶ್ರೀಮತಿ ಮಂಗಳ ಮತ್ತು ಶ್ರೀ ಆರ್. ಪ್ರಕಾಶ್ ಅವರ ಪುತ್ರಿ) |
| 20.05.09 | **ಚಿ॥ ರಾ॥ ಎಸ್. ಶ್ರೀನಿವಾಸ್**<br>(ಶ್ರೀಮತಿ ವತ್ಸಲಾ ಮತ್ತು ಶ್ರೀ ಕೆ. ಶ್ರೀವತ್ಸನ್ ಅವರ ಪುತ್ರ) | **ಚಿ॥ಸೌ॥ಹ॥ಕುಂ॥ಶೋ॥ಅನುಪಮಾ**<br>(ಡಾ॥ ಗೀತಾದೇವಿ ಮತ್ತು ಶ್ರೀ ಹೆಚ್.ಎನ್.ಜಗದೀಶ್ ಅವರ ಪುತ್ರಿ ಹಾಗೂ ದಿ॥ ಹರವೆ ನಾರಾಯಣರಾವ್ ಅವರ ಮೊಮ್ಮಗಳು) |
| 28.05.09<br>ಬೆಂಗಳೂರು | **ಚಿ॥ ರಾ॥ ಮನು ಎಸ್. ಕೌಶಿಕ್**<br>(ಶ್ರೀಮತಿ ಗೀತಾ ಮತ್ತು ಶ್ರೀ ಬಿ. ಜಿ. ಶ್ರೀನಿವಾಸಮೂರ್ತಿ ಅವರ ಮಗ ಹಾಗೂ ದಿ॥ ತೊಟ್ಟಿ ಗೋಪಾಲಯ್ಯನವರ ಮೊಮ್ಮಗ) | **ಚಿ॥ಸೌ॥ಹ॥ಕುಂ॥ಶೋ॥ ಎಸ್.ಪ್ರೀತಿ**<br>(ಶ್ರೀಮತಿ ಸುಮಾ ಮತ್ತು ಶ್ರೀ ಸತ್ಯನಾರಾಯಣರಾವ್ ಅವರ ಪುತ್ರಿ) |
| 18.06.09<br>ಬೆಂಗಳೂರು | **ಚಿ॥ ರಾ॥ ಜಿ. ಹರ್ಷ**<br>(ಶ್ರೀಮತಿ ಪ್ರಭಾವತಿ ಮತ್ತು ಶ್ರೀ ಎಸ್.ಆರ್.ಗೋಪೀನಾಥ್ ಅವರ ಪುತ್ರ) | **ಚಿ॥ ಸೌ॥ ಹ॥ ಕುಂ॥ ಶೋ॥ ಶ್ವೇತಾ**<br>(ಶ್ರೀಮತಿ ವತ್ಸಲಾ ಮತ್ತು ಶ್ರೀ ವೆಂಕಟರಾಮಯ್ಯ. ಎಸ್. (ಗುಂಡು) ಅವರ ಪುತ್ರಿ ಹಾಗೂ ಶ್ರೀಮತಿ ಭಾಗೀರಥಮ್ಮ ಮತ್ತು ಶ್ರೀ ಎಸ್.ವಿ. ಶ್ರೀನಿವಾಸಯ್ಯ (ದಾವಣಗೆರೆ) ಅವರ ಮೊಮ್ಮಗಳು) |
| 25.06.09<br>ಬೆಂಗಳೂರು | **ಚಿ॥ ರಾ॥ ಆರ್. ಎನ್. ನಂದಕುಮಾರ್**<br>(ಶ್ರೀಮತಿ ಮೀನಾಕ್ಷಿ ಮತ್ತು ದಿ॥ ಆರ್.ಎ.ನಾರಾಯಣರಾವ್ ಅವರ ಪುತ್ರ) | **ಚಿ॥ಸೌ॥ಹ॥ಕುಂ॥ಶೋ॥ ಬಿ.ಎನ್.ಅಕ್ಷತಾ**<br>(ಶ್ರೀಮತಿ ಸುಬ್ಬಲಕ್ಷ್ಮೀ ಮತ್ತು ದಿ॥ ಹೆಚ್.ಕೆ.ನಾಗರಾಜ ಅವರ ಪುತ್ರಿ) |





## ಏಪ್ರಿಲ್ ತಿಂಗಳಲ್ಲಿ ಸಂಘಕ್ಕೆ ಬಂದ ಕೊಡುಗೆಗಳು

### ಆಜೀವ ಸದಸ್ಯತ್ವ (ರೂ. 100/-)

| ಹೆಸರು | ಊರು | ರ. ನಂ. | ಆ.ಸ.ಸಂ. |
|---|---|---|---|
| ಎನ್. ಮಾಧವ | ಬೆಂಗಳೂರು | 9246 | 2059 |

### ಸಭಾ ತಾಂಬೂಲಗಳು :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ರಮೇಶ್ ಹರವೆ | ಬೆಂಗಳೂರು | 9254 | 501.00<br>(ಮಗಳ ಮದುವೆ) |

### ಅಶಕ್ತ ಮಾಸಾಶನ ನಿಧಿ :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಎಸ್.ವಿ.ಶ್ರೀನಿವಾಸಯ್ಯ | ಬೆಂಗಳೂರು | 9247 | 1500.00 |

### ವಿದ್ಯಾರ್ಥಿ ವೇತನ ನಿಧಿ :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಎಸ್.ವಿ.ಶ್ರೀನಿವಾಸಯ್ಯ | ಬೆಂಗಳೂರು | 9248 | 1500.00 |
| ಆರ್. ವೈದ್ಯನಾಥನ್ | ಬೆಂಗಳೂರು | 9250 | 251.00 |

### ವಾರ್ತಾ ಜಾಹೀರಾತು / ಫಂಡ್ :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಹೆಚ್.ಎಸ್.ವೆಂಕಟನರಸಿಂಹ | ಬೆಂಗಳೂರು | 9245 | 600.00 |
| ಹೆಚ್. ಎಸ್. ಪುರುಷೋತ್ತಮ್ | ಬೆಂಗಳೂರು | 9253 | 1800.00 |
| ಧೀಮಂತ್ ಇಂಡಸ್ಟ್ರೀಸ್ | ಬೆಂಗಳೂರು | 9258 | 3500.00 |

### ಹಾಸ್ಟೆಲ್ ಅನ್ನದಾನ ನಿಧಿ / ಸೇವಾ :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಹೆಚ್. ಎನ್. ನಾಗರಾಜ | ಬೆಂಗಳೂರು | 9242 | 4000.00<br>(ಸೋದರಮಾವನ ನೆನಪು) |

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಹೆಚ್.ಎನ್.ನಾಗರಾಜ | ಬೆಂಗಳೂರು | 9243 | 400.00 (ಸೋದರಮಾವನ ನೆನಪು) |
| ವಿಶಾಲಿ ಮುತ್ತುಕೃಷ್ಣನ್ | ಬೆಂಗಳೂರು | 9252 | 4000.00 (ಅತ್ತೆಯ ನೆನಪು) |
| ಆರ್. ವಿಜಯಲಕ್ಷ್ಮೀ | ಬೆಂಗಳೂರು | 9256 | 4000.00 (ತಾಯಿಯ ನೆನಪು) |
| ಪದ್ಮಾ ಬಿ.ವಿ.ಕೆ. | ಬೆಂಗಳೂರು | 9257 | 5000.00 (ಪತಿಯ ನೆನಪು) |
| ಹೆಚ್. ಎಸ್. ರಾಘವನ್ | ಮೈಸೂರು | 8973 | 500.00 (ಅಜ್ಜನ ನೆನಪು) |
| ಆರ್. ಶಂಕರ್, ಸಾವಿತ್ರಮ್ಮ, ಶಾರದಮ್ಮ | ಮೈಸೂರು | 8970 | 4000.00 (ತಾಯಿಯ ನೆನಪು) |

## ಏಪ್ರಿಲ್ ತಿಂಗಳಲ್ಲಿ ನಡೆದ ಹಾಸ್ಟೆಲ್ ಅನ್ನದಾನ ಸೇವಾ :

| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 01.04.09 ಬೆಂಗಳೂರು | ವಿಂಗ್ ಕಮಾಂಡರ್ ಬಿ. ವಿ. ಆರ್. ರಾವ್ | ತಾಯಿ ಲಕ್ಷಮ್ಮ |
| 01.04.09 ಬೆಂಗಳೂರು | ಪಿ ಎನ್ ಜಯರಾಮ್ | ಚಿಕ್ಕಪ್ಪ, ಪಿ ಜಿ ಶ್ರೀನಿವಾಸಮೂರ್ತಿ |
| 01.04.09 ಬೆಂಗಳೂರು | ಜಯಪ್ರಕಾಶ್ ಹೆಚ್.ಎಸ್. | ತಂದೆ ಸುಬ್ರಹ್ಮಣ್ಯ ಹೆಚ್.ಜೆ. |
| 02.04.09 ಬೆಂಗಳೂರು | ಪ್ರಭಾಕರ್ ಹೆಚ್.ಎಸ್. | ತಂದೆ ಸುಬ್ರಹ್ಮಣ್ಯ ಹೆಚ್.ವಿ. |
| 03.04.09 ಬೆಂಗಳೂರು | ಡಾ|| ವಿನೋದ ಎನ್. ಮೂರ್ತಿ | ತಮ್ಮದೇ ಹುಟ್ಟುಹಬ್ಬ |
| 03.04.09 ಬೆಂಗಳೂರು | ವೆಂಕಟರಾಮಯ್ಯ ಎಂ. ಎನ್. | ತಮ್ಮ ಹುಟ್ಟುಹಬ್ಬ |





| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 05.04.09 ಯುಎಸ್ಎ | ಮೋಹನ್ ವಿ. ಬಸವಾಪಟ್ಟಣ | ತಂದೆ ವೆಂಕಟರಮಣಯ್ಯ |
| 08.04.09 ಯುಎಸ್ಎ | ವೈದೇಹಿ ಶಿವಶಂಕರ್ | ಪುತ್ರ ರಾಂ ಶಿವಶಂಕರ್ |
| 09.04.09 ಬೆಂಗಳೂರು | ಕಮಲ ಪರಶುರಾಮ ರಾವ್ | ಪತಿ ಪರಶುರಾಮರಾವ್ |
| 09.04.09 ಬೆಂಗಳೂರು | ಹೆಚ್.ಎಸ್. ಪುರುಷೋತ್ತಮ್ | ತಂದೆ ಕೋಳೂರು ಸುಬ್ಬರಾವ್ |
| 09.04.09 ಬೆಂಗಳೂರು | ರಾಮಸ್ವಾಮಿ ಬಿ. ಟಿ. | ತಮ್ಮಯ್ಯಾವಧಾನಿ ಮತ್ತು ಅಮ್ಮಯ್ಯಮ್ಮ |
| 09.04.09 ಮೈಸೂರು | ಶ್ರೀಕಂಠ ಆರ್. ಸಿ. | ತಾಯಿ ಅಚ್ಚಮ್ಮ |
| 14.04.09 ಯುಎಸ್ಎ | ಮೋಹನ್ ವಿ. ಬಸವಾಪಟ್ಟಣ | ತಾಯಿ ಭಾಗೀರಥಮ್ಮ |
| 16.04.09 ಬೆಂಗಳೂರು | ಚಂದ್ರಶೇಖರ್ ಎಸ್. ಆರ್. | ತಂದೆ ಎಸ್. ರಾಜಾರಾಮ ರಾವ್ |
| 17.04.09 ಬೆಂಗಳೂರು | ಇಂದಿರಾ ಆರ್. ಸಿ. | ಪತಿ ಪಿ ಜಿ ಶ್ರೀನಿವಾಸಮೂರ್ತಿ |
| 17.04.09 ಬೆಂಗಳೂರು | ಉಮಾ ನಟರಾಜ್ ಹೆಚ್.ಎಸ್. | ತಾಯಿ ಲಕ್ಷಮ್ಮ ಶ್ರೀನಿವಾಸಯ್ಯ |
| 18.04.09 ಬೆಂಗಳೂರು | ಕೃಷ್ಣಪ್ರಸಾದ್ ಹೆಚ್.ಎಸ್. | ತಂದೆ ಹೆಚ್. ಪಿ. ಶ್ರೀನಿವಾಸಯ್ಯ |
| 18.04.09 ಬೆಂಗಳೂರು | ಮೀರಾ, ಎಸ್.ಕೆ.ಚಂದ್ರಶೇಖರ್ ಗೀತಾ ಸಾಲಿಗ್ರಾಮ್ | ಆರ್.ಕೆ.ವೆಂಕಟರಾಮಾ ಶಾಸ್ತ್ರಿ (ಮಾತಾಮಹ) |
| 19.04.09 ಬೆಂಗಳೂರು | ಶಕುಂತಲಾ ವೆಂಕಟಕೃಷ್ಣಪ್ಪ | ಲಕ್ಷ್ಮೀದೇವಮ್ಮ (ಮಾತಾಮಹಿ) |

| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 21.04.09 ಬೆಂಗಳೂರು | ಅನಂತರಾಮು ಹೆಚ್.ಎಸ್. | ತಾಯಿ ನರ್ಮದಮ್ಮ |
| 21.04.09 ಬೆಂಗಳೂರು | ಸುಬ್ಬಲಕ್ಷಮ್ಮ | ಪತಿ ಆರ್. ಶ್ರೀನಿವಾಸಯ್ಯ |
| 23.04.09 ಬಾಂಬೆ | ಆನಂದ್ ಆರ್. ವಿ. | |
| 23.04.09 ಬೆಂಗಳೂರು | ರಾಮಸ್ವಾಮಿ ಬಿ. ಎಸ್. | ತಂದೆ ಅಜ್ಜಮೇಷ್ಟ್ರು ಶ್ರೀನಿವಾಸಯ್ಯ |
| 25.04.09 ಚೆನ್ನೈ | ಕೃಷ್ಣಮೂರ್ತಿ ಆರ್. ಎನ್. | ಪುತ್ರಿ ಸ್ಮೃತಿಯ ಹುಟ್ಟುಹಬ್ಬ |
| 26.04.09 ಬೆಂಗಳೂರು | ಲೀಲಾ ಶ್ರೀಕಂಠಯ್ಯ | ಪತಿ ಶ್ರೀಕಂಠಯ್ಯ |
| 27.04.09 ಬೆಂಗಳೂರು | ಮೀನಾಕ್ಷಿ ಹೆಚ್. ಎಸ್. | ಪತಿ ಆರ್.ಎ.ನಾರಾಯಣ ರಾವ್ |
| 28.04.09 ಬೆಂಗಳೂರು | ಮಾಯಾ ಹೆಚ್.ವಿ. | |
| 28.04.09 ಬೆಂಗಳೂರು | ಮೀರಾ, ಎಸ್.ಕೆ.ಚಂದ್ರಶೇಖರ್ ಗೀತಾ ಸಾಲಿಗ್ರಾಮ್ | ಸಾವಿತ್ರಮ್ಮ ಆರ್.ಕೆ. ವೆಂಕಟರಾಮಾ ಶಾಸ್ತ್ರಿ |
| 29.04.09 ಮೈಸೂರು | ಬೆಟ್ಟದಪುರ ಸಂಕೇತಿ ಮಂಗಳಕಾರ್ಯ ಸಮಿತಿ | |
| 29.04.09 ಮೈಸೂರು | ಉಷಾ ನಾಗರಾಜ್ | ಮಾವ ಆರ್.ವಿ. ಶ್ರೀಕಂಠಯ್ಯ |
| 29.04.09 ಮೈಸೂರು | ಉಷಾ ನಾಗರಾಜ್ | ತಂದೆ ಅಮಲ್ದಾರ್ ಕೃಷ್ಣಪ್ಪ ಮತ್ತು ತಾಯಿ ಸಾವಿತ್ರಮ್ಮ |





## ಮೇ ತಿಂಗಳಲ್ಲಿ ಸಂಘಕ್ಕೆ ಬಂದ ಕೊಡುಗೆಗಳು

### ಆಜೀವ ಸದಸ್ಯತ್ವ (ರೂ. 100/-)

| ಹೆಸರು | ಊರು | ರ. ನಂ. | ಆ.ಸ.ಸಂ. |
|---|---|---|---|
| ಆರ್. ಎಸ್. ಅನಿಲ್ ಕುಮಾರ್ | ಬೆಂಗಳೂರು | 9260 | 2060 |
| ಆಶಾ ಅನಿಲ್ ಕುಮಾರ್ | ಬೆಂಗಳೂರು | 9261 | 2061 |
| ಸುಮತಿ ಮಿಶ್ರಾ (ಡೀನಾ) | ಮುಂಬಯಿ | 9272 | 2062 |

### ಸಭಾ ತಾಂಬೂಲಗಳು :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಅರುಣ್ ಕುಮಾರ್ ಮತ್ತು ಲಕ್ಷ್ಮೀ | ಬೆಂಗಳೂರು | 9259 | 501.00 |
| | (ಮಗನ ಉಪನಯನ - 01.05.09) | | |
| ಹೆಚ್.ಆರ್. ಕೃಷ್ಣಕುಮಾರ್ | ಬೆಂಗಳೂರು | 9265 | 500.00 |
| | (ಮಗನ ಮದುವೆ - 01.05.09) | | |
| ಬಿ. ವಿ. ಉಮೇಶ್ ಮತ್ತು ಲತಾ | ಮೈಸೂರು | 9266 | 500.00 |
| | (ಮಗಳ ಮದುವೆ - 01.05.09) | | |
| ಡಾ॥ ಆರ್. ಕೆ. ಚಂದ್ರಹಾಸ | ಬೆಂಗಳೂರು | 9267 | 501.00 |
| | (ಮೊಮ್ಮಗನ ಉಪನಯನ - 01.05.09) | | |
| ಆರ್. ಎಲ್. ಜಗದೀಶ್ | ಮೈಸೂರು | 9268 | 100.00 |
| | (ಗೃಹಪ್ರವೇಶ - 01.05.09) | | |
| ಮಂಜುಳಾ ಸುಬ್ರಹ್ಮಣ್ಯ | ಬೆಂಗಳೂರು | 9269 | 300.00 |
| | (ಮಗನ ಉಪನಯನ - 01.05.09) | | |
| ಬಿ. ಎಸ್. ಸುರೇಶ್ ಕುಮಾರ | ಬೆಂಗಳೂರು | 9271 | 101.00 |
| | (ಮಗನ ಉಪನಯನ - 10.05.09) | | |
| ಶ್ರೀನಿವಾಸ ಕುಮಾರ್ | ಮೈಸೂರು | 9273 | 300.00 |
| | (ಮಗನ ಉಪನಯನ - 07.05.09) | | |
| ಹೆಚ್.ಎಸ್. ಕುಮಾರ್ | ಬೆಂಗಳೂರು | 9280 | 1001.00 |
| | (ಮಗನ ಉಪನಯನ - 11.05.09) | | |

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಆರ್. ಪ್ರಕಾಶ್ | ಮಂಡ್ಯ | 9281 | 500.00 |
| | | | (ಮಗಳ ಮದುವೆ - 20.05.09) |
| ರಾಜೇಶ್ವರಿ ಧೂರ್ಜಟಿ | ಬೆಂಗಳೂರು | 9288 | 200.00 |
| | | | (ಮಗಳ ಮದುವೆ - 07.05.09) |
| ರಾಜನ್ ದತ್ತ | ಬೆಂಗಳೂರು | 9289 | 101.00 |
| | | | (ಮಗನ ಉಪನಯನ - 21.05.09) |
| ಎಸ್. ಶ್ರೀರಾಮ್ | ಬೆಂಗಳೂರು | 9290 | 500.00 |
| | | | (ಮಗನ ಉಪನಯನ - 28.05.09) |
| ಹೆಚ್.ಎಸ್. ಕಪಾಲೇಶ್ವರ್ | ಬೆಂಗಳೂರು | 9294 | 501.00 |
| | | | (ಗೃಹಪ್ರವೇಶ - 31.05.09) |
| ಆರ್. ಎಸ್. ಶ್ರೀನಿವಾಸಯ್ಯ | ಬೆಂಗಳೂರು | 9295 | 1001.00 |
| | | | (ಮಗಳ ಮದುವೆ - 04.05.09) |

## ವಾರ್ತಾ ಜಾಹೀರಾತು / ಫಂಡ್ :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಬಿ. ಎಸ್. ಪ್ರಭಾಶಂಕರ್ | ಬೆಟ್ಟದಪುರ | 9262 | 600.00 |
| ಜ್ಯೋತಿ ಇಂಡಸ್ಟ್ರೀಸ್ | ಬೆಂಗಳೂರು | 9270 | 1800.00 |
| ಆರ್. ಕೃಷ್ಣಪ್ರಕಾಶ್ | ಬೆಂಗಳೂರು | 9274 | 600.00 |
| ಬಿ. ಸುರೇಶ ಶಾಸ್ತ್ರಿ ಮತ್ತು ಸಹೋದರರು | ವಾರಣಾಸಿ | 9279 | 2400.00 |
| ಮೈಸೂರು ಕನ್ಸಲ್‌ಟೆಂಟ್ಸ್ | ಬೆಂಗಳೂರು | 9292 | 1800.00 |
| ಹೆಚ್.ಎಸ್.ಅಚ್ಯುತ | ಬೆಂಗಳೂರು | 9293 | 2000.00 |

## ವಾರ್ತಾ ಪೋಷಕಿ :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ರೇಖಾ ಅರುಣ್ | ಬೆಂಗಳೂರು | 9278 | 1000.00 |
| ಲೀಲಾ ಶ್ರೀಕಂಠಯ್ಯ | ಬೆಂಗಳೂರು | 9297 | 1000.00 |





## ಹಾಸ್ಟೆಲ್ ಅನ್ನದಾನ ನಿಧಿ / ಸೇವಾ :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಬಿ. ಎನ್. ರಮೇಶ್ | ಬೆಂಗಳೂರು | 9263 | 400.00 |
| | | | (ತಂದೆಯ ನೆನಪು) |
| ಬಿ. ಎನ್. ರಮೇಶ್ | ಬೆಂಗಳೂರು | 9264 | 400.00 |
| | | | (ತಾಯಿಯ ನೆನಪು) |
| ಆರ್. ಸುಬ್ರಹ್ಮಣ್ಯ | ಹಾಸನ | 9277 | 5000.00 |
| | | | (ಅಮೇರಿಕದಲ್ಲಿರುವ ಮೊಮ್ಮಗನ ಹುಟ್ಟುಹಬ್ಬ) |
| ಎಸ್.ಜಿ. ಕೃಷ್ಣಮೂರ್ತಿ | ಬೆಂಗಳೂರು | 9285 | 4000.00 |
| | | | (ತಂಗಿಯ ನೆನಪು) |
| ಎಸ್.ಜಿ. ಕೃಷ್ಣಮೂರ್ತಿ | ಬೆಂಗಳೂರು | 9286 | 400.00 |
| | | | (ತಂಗಿಯ ನೆನಪು) |
| ನಿರಂಜನಿ ಕೃಷ್ಣಮೂರ್ತಿ | ಬೆಂಗಳೂರು | 9287 | 4000.00 |
| | | | (ಅಕ್ಕನ ನೆನಪು) |

## ವೃದ್ಧಾಶ್ರಮ ಫಂಡ್ :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಬಾಂಬೆ ಸಂಕೇತಿ ಭಗಿನಿ ಸಮಾಜ | ಮುಂಬಯಿ | 9275 | 2,500.00 |
| ಆರ್. ಸುಬ್ರಹ್ಮಣ್ಯ | ಹಾಸನ | 9276 | 20,000.00 |
| ಹೆಚ್. ಎಸ್. ಶ್ರೀಕಂಠ | ಬೆಂಗಳೂರು | 9283 | 5,000.00 |
| ಲೀಲಾ ಜಗನ್ನಾಥ | ಯುಎಸ್ಎ | 8680 | 5,14,000.00 |

## ಮೇ ತಿಂಗಳಲ್ಲಿ ನಡೆದ ಹಾಸ್ಟೆಲ್ ಅನ್ನದಾನ ಸೇವಾ :

| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 01.05.09 | ಚಂದ್ರ ಎನ್. ಆತ್ರೇಯ | |
| ಬಾಂಬೆ | 3 ದಿನಗಳು | |
| 01.05.09 | ಪಿ.ಎನ್.ಜಯರಾಂ | ಅಜ್ಜ ಪಿ.ಟಿ.ಎನ್. |
| ಬೆಂಗಳೂರು | | ಗುಂಡೂರಾಮಯ್ಯ |

| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 01.05.09 ಮೈಸೂರು | ಕೃಷ್ಣಮೂರ್ತಿ ಆರ್.ವಿ. | ಸಹೋದರ ರುದ್ರಪಟ್ಣ ಲಕ್ಷ್ಮೀಕಾಂತಯ್ಯ |
| 03.05.09 ಬೆಂಗಳೂರು | ಮೂರ್ತಿ ಬಿ. ಜಿ.ಎಸ್. | ತಾಯಿ ಜಯಲಕ್ಷಮ್ಮ |
| 04.05.09 ಬಾಂಬೆ | ಧನಂಜಯ. ಎ. | ತಮ್ಮ ಹುಟ್ಟುಹಬ್ಬ |
| 04.05.09 ಬೆಂಗಳೂರು | ನಿರ್ಮಲಾ. ಎಸ್. | ಪಿ.ಎನ್.ಸುಬ್ರಹ್ಮಣ್ಯ ಅವರ ಹುಟ್ಟುಹಬ್ಬ |
| 05.05.09 ಯುಎಸ್ಎ | ಮತ್ತೂರು ಆರ್. ಬಾಲಕೃಷ್ಣ | ತಂದೆ ಎನ್. ರಾಮಸ್ವಾಮಿ |
| 05.05.09 ಬೆಂಗಳೂರು | ನಾಗೇಶ್ ಬಿ. ಆರ್. | ತಂದೆ ಬಿ. ಕೆ. ರಾಮಸ್ವಾಮಯ್ಯ |
| 06.05.09 ಬೆಂಗಳೂರು | ಬಾಲಕೃಷ್ಣ ಹೆಚ್. ಎಸ್. | ಪುತ್ರಿ ನಾಗವಲ್ಲೀ |
| 06.05.09 ಬಾಂಬೆ | ಚಿತ್ತರಂಜನ್ ಬಿ. ಎನ್. | ತಂದೆ ನಾರಾಯಣಸ್ವಾಮಿ |
| 06.05.09 ಮೈಸೂರು | ನಾಗರಾಜ ಆರ್.ಎಸ್. | ಪತ್ನಿ ಶ್ರೀಮತಿ ಶ್ಯಾಮಲಾ |
| 06.05.09 ಮೈಸೂರು | ಹೆಚ್. ಎಸ್. ರಾಘವನ್ | ಅಜ್ಜ ಲಕ್ಷ್ಮೀಕಾಂತಯ್ಯ |
| 07.05.09 ಬೆಂಗಳೂರು | ಪ್ರಭಾಕರ ಹೆಚ್. ಎಸ್. | ಅತ್ತೆ ಛಾಯಾ |
| 07.05.09 ಬೆಂಗಳೂರು | ಶಕುಂತಲಾ ವೆಂಕಟಕೃಷ್ಣಪ್ಪ | ಮಾವ ಬಿ. ಶ್ರೀನಿವಾಸಯ್ಯ |
| 08.05.09 ಯುಎಸ್ಎ | ವೈದೇಹಿ ಶಿವಶಂಕರ್ | ಪುತ್ರ ರಾಂ ಶಿವಶಂಕರ್ |





| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 09.05.09 ಬೆಂಗಳೂರು | ಶಾಂತಲಕ್ಷ್ಮೀ. ಬಿ. ಎನ್. | ಪತಿ ಡಾ॥ ಮೋಹನ್‌ರಾಂ |
| 09.05.09 ಬೆಂಗಳೂರು | ಸುಬ್ಬಲಕ್ಷಮ್ಮ | ತಂದೆ ನರಸಿಂಹಯ್ಯ |
| 13.05.09 ಬೆಂಗಳೂರು | ಸುಬ್ರಹ್ಮಣ್ಯ ಬಿ.ಎನ್.ವಿ. | ಅಜ್ಜಿ ಪುಟ್ಟಕ್ಕಯ್ಯಮ್ಮ |
| 13.05.09 ಬೆಂಗಳೂರು | ಸುಬ್ರಹ್ಮಣ್ಯ ಬಿ.ಎನ್.ವಿ. | ತಂದೆ ಅಣ್ಣಾಜಿ ನಾರಾಯಣ ಸ್ವಾಮಿ |
| 15.05.09 ಬಾಂಬೆ | ಮೀರಾ ಜಂಬುನಾಥನ್ | ಪತಿ ಜಂಬುನಾಥನ್ ಎಸ್. ಎನ್. |
| 16.05.09 ಬೆಂಗಳೂರು | ಜಯರಾಂ ಬಿ.ಎಸ್. | ತಾಯಿ ಪಾರ್ವತಮ್ಮ |
| 19.05.09 ಬೆಂಗಳೂರು | ಸೀತಾ ಮುಕುಂದ ರಾವ್ | ಪತಿ ಎಸ್. ಮುಕುಂದ ರಾವ್ |
| 19.05.09 ಬೆಂಗಳೂರು | ಯಶೋದಮ್ಮ ಮತ್ತು ಮಕ್ಕಳು | ಎಂ. ಕೆ. ಶಂಕರ ನಾರಾಯಣ |
| 20.05.09 ಬೆಂಗಳೂರು | ನರಸಿಂಹನ್. ಎಂ. | ತಂದೆ ಮಲ್ಲಿಕಾರ್ಜುನ ಶಾಸ್ತ್ರಿ |
| 20.05.09 ಬೆಂಗಳೂರು | ಸೀತಾ ಬಿ. ವಿ. | ತಂದೆ ಮಲ್ಲಿಕಾರ್ಜುನ ಶಾಸ್ತ್ರಿ |
| 20.05.09 ಬೆಂಗಳೂರು | ಶಕುಂತಲಾ ವೆಂಕಟಕೃಷ್ಣಪ್ಪ | ಅತ್ತೆ ಪಾರ್ವತಮ್ಮ ಶ್ರೀನಿವಾಸಯ್ಯ |
| 20.05.08 ಯುಎಸ್ಎ | ಡಾ॥ ಸುಬ್ಬರಾವ್ ಆರ್.ಸಿ. | ಸಹೋದರ ಅತ್ರಿ ಶರ್ಮ |
| 23.05.09 ಬೆಂಗಳೂರು | ಜಯರಾಂ ಬಿ.ಎಸ್. | ತಂದೆ ಬಿ. ಶ್ರೀನಿವಾಸಯ್ಯ |

| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 23.05.09 ಬಾಂಬೆ | ಶ್ರೀನಿವಾಸಮೂರ್ತಿ ಆರ್.ವಿ. ಮತ್ತು ರಾಜೇಶ್ವರಿ | ವಿವಾಹ ವಾರ್ಷಿಕೋತ್ಸವ |
| 23.05.09 ಬೆಂಗಳೂರು | ಡಾ|| ವಿಶ್ವೇಶ್ವರಯ್ಯ ಆರ್.ಎನ್. | ತಂದೆ ಆರ್.ಪಿ. ನಾರಾಯಣ ರಾವ್ |
| 24.05.09 ಮೈಸೂರು | ನಾಗರಾಜ್ ಎಸ್.ಎನ್. ಎಸ್.ಎನ್. ರವೀಶ್ | ಹಿರಿಯ ಸಹೋದರಿ ನಾಗಲಕ್ಷ್ಮಿ |
| 24.05.09 ಮಂಡ್ಯ | ಶಾಮಣ್ಣ ಆರ್. ಜಿ. | ಹಿರಿಯ ಸಹೋದರ ಆರ್.ಜಿ.ವೆಂಕಟರಾಮಯ್ಯ |
| 25.05.09 ಬೆಂಗಳೂರು | ಡಾ|| ಎಸ್.ಮೋಹನ್ ರಾಂ | ಪುತ್ರಿ ನಳಿನಿ ಶ್ರೀನಿವಾಸ್ ಹುಟ್ಟುಹಬ್ಬ |
| 25.05.09 ಬೆಂಗಳೂರು | ರಮೇಶ್ ಎಸ್.ಜಿ. ಮತ್ತು ಸಹೋದರರು | ತಂದೆ ಆರ್. ಗಂಗಾಧರಯ್ಯ |
| 26.05.09 ಬೆಂಗಳೂರು | ಮಾಯಾ ಹೆಚ್.ವಿ. | |
| 27.05.09 ಯುಎಸ್ಎ | ದತ್ತಾತ್ರಿ | ತಂದೆ ರಾಧಾಕೃಷ್ಣ |
| 27.05.09 ಬೆಂಗಳೂರು | ಮುರಳೀಧರ ಆರ್. ಎಲ್. | ತಂದೆ ಆರ್. ಜಿ. ಲಕ್ಷ್ಮೀ ಕಾಂತಯ್ಯ (ಕಣಿವೆ ಶಾಮಪ್ಪ) |
| 27.05.09 ಹಾಸನ | ಪ್ರಣತಾರ್ತಿ ಹರನ್ | ಪುತ್ರಿ ಶರ್ವಾಣಿ ಹರನ್ ಹುಟ್ಟುಹಬ್ಬ |
| 27.05.09 ಯುಎಸ್ಎ | ಶಿವರಾಂ ಆರ್. | ತಂದೆ ರಾಧಾಕೃಷ್ಣ |
| 28.05.09 ಬೆಂಗಳೂರು | ಸದಾಶಿವ ಎಸ್.ಎಸ್. | ತಾಯಿ ಸಾವಿತ್ರಮ್ಮ |





| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 28.05.09 ಹಾಸನ | ಸುಬ್ರಹ್ಮಣ್ಯ ಆರ್. | ಪುತ್ರನ ವಿವಾಹದ ದಿನ |
| 29.05.09 ಯುಎಸ್ಎ | ಲೀಲಾ ಜಗನ್ನಾಥ್ | ಅಜ್ಜ ವೆಂಕಟರಾಮಯ್ಯ |
| 30.05.09 ಬೆಂಗಳೂರು | ರಮೇಶ್. ಬಿ. ಎನ್., ಸುಬ್ರಹ್ಮಣ್ಯ, ಕೃಷ್ಣಮೂರ್ತಿ, ರವಿ | ತಾಯಿ ಹೆಚ್. ಎಲ್. ಪಾರ್ವತಮ್ಮ |
| 30.05.09 ಬೆಂಗಳೂರು | ಸಾವಿತ್ರಿ ವಿಶ್ವನಾಥ್ | ತಾಯಿ ಸುವರ್ಣ (ಎಸ್.ಸಿ. ಶ್ರೀನಿವಾಸ ಮೂರ್ತಿಯವರ ಪತ್ನಿ) |
| 31.05.09 ಬೆಂಗಳೂರು | ಸುಧೀರ್. ಪಿ. | ತಾಯಿ ಕಮಲಾ ಪರಶುರಾಮ ರಾವ್ |

## *Change of Address*

**Ravi Manjanath**
**Rajasri**
No. 62, 3rd Main, 3rd Cross, 1st Block,
BSK 3rd Stage, Bangalore - 560 085
Ph : 26722551

**Vijaya Murthy**
**Arun**
**Ragini**
'Shivashankari Pearls', Ground Floor, Flat No. G-3,
2nd Cross, Udayanagar, Uttarahalli Main Road,
Bangalore - 560 061
Ph : 65347021, 963222902

## ಪ್ರತಿಭೆ



**ಚಿ|| ಅಭಿಷೇಕ್. ಹೆಚ್. ಎ.**

**10ನೇ ತರಗತಿ – ಶೇ. 94.72**

ತಂದೆ : ಅನಂತ ಪದ್ಮನಾಭ. ಹೆಚ್. ಎಸ್.

ತಾಯಿ : ಡಿ. ಆಶಾ

ಅಜ್ಜಂದಿರು : ದಿ|| ಶ್ರೀನಿವಾಸಮೂರ್ತಿ ಹೆಚ್. ಎಲ್.
ಮತ್ತು ದಿ|| ಧ್ರುವನಾರಾಯಣ

ಅಜ್ಜಿಯರು : ಶ್ರೀಮತಿ ಸುಬ್ಬಲಕ್ಷ್ಮಮ್ಮ ಮತ್ತು ಶ್ರೀಮತಿ ನಾಗರತ್ನಮ್ಮ



**ಚಿ|| ಅಭಿಲಾಷ್. ಬಿ. ಎನ್.**

**10ನೇ ತರಗತಿ – ಶೇ. 92.64**

ತಂದೆ : ನಾಗರಾಜ್. ಬಿ. ವಿ.

ತಾಯಿ : ಗಾಯಿತ್ರಿ. ಆರ್. ಕೆ.

ಅಜ್ಜಂದಿರು : ದಿ|| ಆರ್. ಜಿ. ಕೃಷ್ಣಪ್ಪ (ಜಹಗಿರಿ)
ಮತ್ತು ದಿ|| ಎಸ್.ಎಂ. ವೆಂಕಟರಾಮಯ್ಯ

ಅಜ್ಜಿಯರು : ಶ್ರೀಮತಿ ಜಯಲಕ್ಷ್ಮಮ್ಮ ಮತ್ತು ದಿ|| ಶಾಂತಮ್ಮ



**ಕು|| ರೇವತಿ. ಸಿ. ಕಟ್ಟೇಪುರ**

**ದ್ವಿತೀಯ ಪಿಯುಸಿ – ಶೇ. 96.16**

ತಂದೆ : ಚಂದ್ರಶೇಖರ ಕಟ್ಟೇಪುರ

ತಾಯಿ : ಆರ್. ಕೆ. ವನಲಕ್ಷ್ಮಿ

ಅಜ್ಜಂದಿರು : ಡಾ|| ಮಂಜುನಾಥಯ್ಯ ಮತ್ತು
ಆರ್. ಎಸ್. ಕಾಶೀಪತಿ

ಅಜ್ಜಿಯರು : ಶ್ರೀಮತಿ ಸೀತಾಲಕ್ಷ್ಮೀ ಮತ್ತು ಶ್ರೀಮತಿ ಆರ್. ಎಸ್. ಕಮಲಮ್ಮ







**ಕು|| ಅಶ್ವಿನಿ. ಆರ್. ಎಸ್.**

**ದ್ವಿತೀಯ ಪಿಯುಸಿ – ಶೇ. 96.8**

ತಂದೆ : ರವಿಶಂಕರ್. ಆರ್. ಎನ್.

ತಾಯಿ : ಮಮತಾ. ಆರ್. ಎಸ್.

ಅಜ್ಜಂದಿರು : ಶ್ರೀ ನಾರಾಯಣಸ್ವಾಮಿ ಮತ್ತು
ಶ್ರೀ ಸುಬ್ಬರಾವ್. ಎಂ. ಎಸ್.

ಅಜ್ಜಿಯರು : ಶ್ರೀಮತಿ ಪಾರ್ವತಮ್ಮ. ಆರ್. ಎಸ್.
ಮತ್ತು ಶ್ರೀಮತಿ ಸರಸ್ವತಿ ಸುಬ್ಬರಾವ್



**ಕು|| ಅನುಪಮಾ ಕೆ.. ಎಸ್.**

**ಎಸ್.ಎಸ್.ಎಲ್.ಸಿ. – ಶೇ. 97.28**

ತಂದೆ : ಕೆ. ಎಸ್. ಶ್ರೀನಿವಾಸ

ತಾಯಿ : ಪೂರ್ಣಿಮಾ

ಅಜ್ಜಂದಿರು : ದಿ|| ಕೆ. ಜಿ. ಶಾಮಣ್ಣ ಮತ್ತು
ಶ್ರೀ ಆರ್.ಎಸ್. ಆನಂದ್‌ರಾಮ್

ಅಜ್ಜಿಯರು : ಶ್ರೀಮತಿ ಲಲಿತ ಮತ್ತು ಶ್ರೀಮತಿ ಸುಜಯ



**ಕು|| ವರ್ಷಿಣೀ ಕೌಶಿಕ್**

**ಎಸ್.ಎಸ್.ಎಲ್.ಸಿ. – ಶೇ. 89**

ತಂದೆ : ಆರ್. ಕೆ. ನಾಗರಾಜ

ತಾಯಿ : ಸಂಗೀತಾ

ಅಜ್ಜಂದಿರು : ದಿ|| ಆರ್. ವಿ. ಕೃಷ್ಣಮೂರ್ತಿ ಮತ್ತು
ಶ್ರೀ ವಾಸುದೇವ ಮೂರ್ತಿ

ಅಜ್ಜಿಯರು : ದಿ|| ಆರ್. ವಿ. ನಾಗಮ್ಮ ಮತ್ತು ಶ್ರೀಮತಿ ಎಂ. ವಿ. ಮಂಜುಳಾ

1. **Karnataka Music Junior Grade - Vocal - 92.3%**
2. **Florence Public School "Inter School Competition" secured "Voice of the Year" (18 Schools participated)**
3. ಹೊಂಗಿರಣ ಕಲಾನಿಕೇತನ (ರಾಜ್ಯಮಟ್ಟ)
   ಭಾವಗೀತೆ ಮತ್ತು ಚಲನಚಿತ್ರ ಗೀತೆ - ಪ್ರಥಮ ಸ್ಥಾನ
   ರಂಗಗೀತೆ ಮತ್ತು ಜನಪದ ಗೀತೆ - ಪ್ರಥಮ ಸ್ಥಾನ
4. ಕರ್ನಾಟಕ ಪ್ರತಿಭಾ ವರ್ಧಕ ಅಕಾಡೆಮಿ (ರಾಜ್ಯಮಟ್ಟ)
   ಭಾವಗೀತ ಮತ್ತು ಜನಪದ ಗೀತೆ - ಪ್ರಥಮ ಸ್ಥಾನ
5. ಹೊಂಬಾಳೆ ಪ್ರತಿಭಾ ರಂಗ (ರಾಜ್ಯಮಟ್ಟ)
   ಭಾವಗೀತೆ - ಪ್ರಥಮ ಸ್ಥಾನ



**ಕು|| ಅಮೃತ ವರ್ಷಿಣೀ**

ದ್ವಿತೀಯ ಪಿಯುಸಿ - ಶೇ. 88 (ಸಂಸ್ಕೃತ - 97 ಅಂಕಗಳು)

ತಂದೆ : ಹೆಚ್. ಎನ್. ಸೋಮಸುಂದರ

ತಾಯಿ : ಲಲಿತಾ

ಅಜ್ಜ : ದಿ|| ಹೆಚ್. ಎಸ್. ನಂಜುಂಡಯ್ಯ

ಅಜ್ಜಿ : ದಿ|| ಸಾವಿತ್ರಮ್ಮ

**ಎಲ್ಲರಿಗೂ ಸಂಘದ ಅಭಿನಂದನೆಗಳು**

**ಸಂಪರ್ಕಿಸಿ :**

ವಧೂ-ವರರ ವಿವರಣೆಗಳಿಗಾಗಿ ನಮ್ಮ ಬಾಂಧವರು ಶ್ರೀಯುತ ಹೆಚ್.ವಿ. ಮುರಳೀಧರ ಅವರನ್ನು ಸಂಪರ್ಕಿಸಬಹುದು.

**(P. G. Accommodation Available)**

**ದೂ : 9242803829, 9341413319**





## ಶ್ರದ್ಧಾಂಜಲಿ

01.05.09 ಬೆಂಗಳೂರು **ವಿಜಯಲಕ್ಷ್ಮೀ ಕುಮಾರ್, 58 ವರ್ಷ, ನೈಧ್ರುವಕಾಶ್ಯಪ ಗೋತ್ರ** (ಮುಂಬಯಿಯಲ್ಲಿರುವ ಶ್ರೀ ಆರ್. ಎ. ವಸಂತಕುಮಾರ್ (ಪಾಂಡುರಂಗ) ಅವರ ಧರ್ಮಪತ್ನಿ)

07.05.09 ಮೈಸೂರು **ಎಸ್. ಎನ್. ಕಾವೇರಮ್ಮ (ಪುಟ್ಟು) 94 ವರ್ಷ, ಸಂಕೃತಿ ಗೋತ್ರ**



10.05.09 ಮೈಸೂರು **ಬಿ. ಎನ್. ಗೋಪಾಲಮೂರ್ತಿ, 79 ವರ್ಷ, ಕೌಶಿಕ ಗೋತ್ರ** (ಬಸವಾಪಟ್ಟಣದ ನಾಲಾಬೀದಿಯ ದಿ|| ನರಸಿಂಹಯ್ಯ ಮತ್ತು ದಿ|| ಸುಬ್ಬಲಕ್ಷಮ್ಮ ಅವರ ಪುತ್ರ)



09.06.09 ಮೈಸೂರು **ಎಸ್. ಎನ್. ಶ್ರೀಕಂಠಯ್ಯ (ಎಲ್‌ಐಸಿ) 76 ವರ್ಷ, ಆತ್ರೇಯಸಗೋತ್ರ**

16.06.09 ಬೆಂಗಳೂರು **ಅನಂತಯ್ಯ, 54 ವರ್ಷ, ಸಂಕೃತಿ ಗೋತ್ರ** (ಅನ್ನಪೂರ್ಣಮ್ಮ ಮತ್ತು ರುದ್ರಪಟ್ಟಣದ ದಿ|| ಶಾನುಭೋಗ್ ಶ್ರೀನಿವಾಸಯ್ಯನವರ ಮಗ)

29.06.09 ಮೈಸೂರು **ಶ್ರೀಮತಿ ಅನಸೂಯಮ್ಮ, 82 ವರ್ಷ, ಗಾರ್ಗ್ಯ ಭಾರದ್ವಾಜ ಗೋತ್ರ** (ಬೆಟ್ಟದಪುರದ ದಿ|| ಬಿ. ಎನ್. ಸುಬ್ಬರಾಯರ ಧರ್ಮಪತ್ನಿ)

02.07.09 ಮೈಸೂರು **ಎಸ್. ವಿ. ಸಾವಿತ್ರಮ್ಮ 91 ವರ್ಷ, ಕೌಶಿಕ ಗೋತ್ರ** (ದಿ|| ಪಿ. ಸದಾಶಿವರಾವ್ ಅವರ ಧರ್ಮಪತ್ನಿ)

ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ ಅವರ ಕುಟುಂಬ ವರ್ಗದವರಿಗೆ ಈ ದುಃಖವನ್ನು ಭರಿಸಲು ಧೈರ್ಯ, ಸ್ಥೈರ್ಯಗಳನ್ನು ಭಗವಂತನು ಅನುಗ್ರಹಿಸಲಿ ಎಂದು ಪ್ರಾರ್ಥಿಸುತ್ತೇವೆ.

# ವಿದ್ಯಾರ್ಥಿ ವೇತನಗಳು - 2009 - 2010

ಪ್ರತಿ ವರ್ಷವೂ ಸಂಘದ ವತಿಯಿಂದ ಸಂಕೇತಿ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿ ವೇತನಗಳನ್ನು ನೀಡುವ ಕಾರ್ಯಕ್ರಮವನ್ನು ಕಾರ್ಯಕಾರಿ ಸಮಿತಿಯು ನಡೆಸಿಕೊಂಡು ಬಂದಿದೆ.

ಪ್ರಸಕ್ತ ಸಾಲಿನ ಎಂದರೆ 2009-2010ನೇ ಸಾಲಿನಲ್ಲಿ 7ನೇ ತರಗತಿಯಿಂದ ಮೊದಲಾಗಿ ಡಿಗ್ರಿ ಕೋರ್ಸ್‌ಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಎಲ್ಲಾ ವಿದ್ಯಾರ್ಥಿಗಳೂ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿಯನ್ನು ಸಲ್ಲಿಸಬಹುದು.

ಈ ಸಂಚಿಕೆಯಲ್ಲಿ ಅರ್ಜಿಯ ನಮೂನೆ ಫಾರಂನ್ನು ಪ್ರಕಟಿಸಲಾಗಿದೆ. ಪ್ರತ್ಯೇಕ ಹಾಳೆಯಲ್ಲಿ ಈ ನಮೂನೆಯ ಪ್ರಕಾರ ಪೂರ್ಣ ಮಾಹಿತಿಯೊಂದಿಗೆ ಅರ್ಜಿಗಳನ್ನು ನಮ್ಮ ಕಾರ್ಯಾಲಯಕ್ಕೆ ಕಳುಹಿಸಬೇಕು. ಕೆಳಗೆ ನಮೂದಿಸಿರುವ ನಿಬಂಧನೆಗಳನ್ನು ಅಭ್ಯರ್ಥಿಗಳು ಗಮನಿಸಬೇಕು.

1. ಅರ್ಜಿಗಳನ್ನು ತಾ|| **20.08.2009**ರೊಳಗೆ ಸಂಘದ ಕಾರ್ಯಾಲಯಕ್ಕೆ ತಲುಪುವಂತೆ ಕಳುಹಿಸಬೇಕು.
2. ಅರ್ಜಿಗಳು ಪೂರ್ಣವಾಗಿ ಭರ್ತಿ ಮಾಡಲ್ಪಟ್ಟು ಅಭ್ಯರ್ಥಿ ಮತ್ತು ಅವರ ತಂದೆ ಅಥವಾ ತಾಯಿ ಅಥವಾ ಪೋಷಕರ ಸಹಿಯನ್ನು ಹೊಂದಿರಬೇಕು.
3. ಅರ್ಜಿಯ ಜೊತೆಯಲ್ಲಿ ಅಭ್ಯರ್ಥಿ ಪಾಸು ಮಾಡಿದ ಹಿಂದಿನ ಪರೀಕ್ಷೆಯ ಅಂಕ ಪತ್ರವನ್ನೂ ಮತ್ತು ಅಭ್ಯರ್ಥಿಯು ಈಗ ವಿದ್ಯಾಭ್ಯಾಸ ಮಾಡುತ್ತಿರುವ ತರಗತಿಯ ಬಗ್ಗೆ ಶಾಲೆ/ಕಾಲೇಜಿನ ಮುಖ್ಯೋಪಾಧ್ಯಾಯ/ಪ್ರಿನ್ಸಿಪಾಲರಿಂದ ಸರ್ಟಿಫಿಕೇಟನ್ನೂ ಕಳುಹಿಸಬೇಕು.
4. ಸಾಮಾನ್ಯ ವಿದ್ಯಾರ್ಥಿ ವೇತನಗಳನ್ನು (ಜನರಲ್ ಸ್ಕಾಲರ್‌ಶಿಪ್ಸ್) 7ನೇ ತರಗತಿಯಿಂದ ಮೊದಲುಗೊಂಡು ಸಾಮಾನ್ಯ ಡಿಗ್ರಿ ತರಗತಿಗಳಲ್ಲಿ (ಬಿ.ಎಸ್ಸಿ., ಬಿ.ಕಾಂ., ಬಿ.ಎ.) ವಿದ್ಯಾಭ್ಯಾಸ ಮಾಡುತ್ತಿರುವವರಿಗೆ ನೀಡಲಾಗುವುದು. ಆದರೆ ಇಂತಹ ಅಭ್ಯರ್ಥಿಗಳ ತಂದೆ ಮತ್ತು ತಾಯಿ ಅಥವಾ ಪೋಷಕರ (ತಂದೆ ಇಲ್ಲದಿದ್ದಲ್ಲಿ) ಒಟ್ಟು ವಾರ್ಷಿಕ ವರಮಾನ **ರೂ. 72,000**ಕ್ಕಿಂತ ಹೆಚ್ಚಿರಬಾರದು. ಅರ್ಜಿಯಲ್ಲಿ ಇವರ ಉದ್ಯೋಗದ ವಿವರಗಳು ಕಛೇರಿ ವಿಳಾಸ ಮತ್ತು ವಾರ್ಷಿಕ ವರಮಾನದ ವಿವರಗಳನ್ನು ಕೊಡುವುದಲ್ಲದೆ ಸಂಬಂಧಪಟ್ಟ ಅಧಿಕಾರಿಗಳಿಂದ ವರಮಾನ ದೃಢೀಕರಣ ಪತ್ರವನ್ನೂ (ಇನ್‌ಕಂ ಸರ್ಟಿಫಿಕೇಟ್) ಲಗತ್ತಿಸಬೇಕು.





5. ಸಾಮಾನ್ಯ ವಿದ್ಯಾರ್ಥಿ ವೇತನಗಳನ್ನು ಪಡೆದ ವಿದ್ಯಾರ್ಥಿಯು ಹಣವನ್ನು ಸಂಘಕ್ಕೆ ಹಿಂತಿರುಗಿಸಬೇಕಾಗಿಲ್ಲ. ಆದರೆ ಅಭ್ಯರ್ಥಿಗಳು ತಮ್ಮ ವಿದ್ಯಾಭ್ಯಾಸ ಪೂರೈಸಿ, ಉದ್ಯೋಗಸ್ಥರಾದ ನಂತರ ಸಂಘದ ಆಜೀವ ಸದಸ್ಯರಾಗಿ, ತಮ್ಮ ಶಕ್ತ್ಯಾನುಸಾರ ಸಂಘದ ವಿದ್ಯಾರ್ಥಿ ವೇತನ ನಿಧಿಗೆ ಕೊಡುಗೆಗಳನ್ನು ನೀಡುತ್ತಾರೆಂದು ನಿರೀಕ್ಷಿಸಲಾಗಿದೆ.
6. ವೇದಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೂ ಈ ಸಾಮಾನ್ಯ ವಿದ್ಯಾರ್ಥಿ ವೇತನಗಳನ್ನು ನೀಡಲಾಗುವುದು. ಇವರುಗಳು ತಮ್ಮ ಗುರುಗಳಿಂದ ವೇದಾಭ್ಯಾಸದ ಪ್ರಗತಿಯ ಬಗ್ಗೆ ಸರ್ಟಿಫಿಕೇಟನ್ನು ಪಡೆದು ಅರ್ಜಿಯ ಜೊತೆಯಲ್ಲಿ ಕಳುಹಿಸಬೇಕು. ಒಬ್ಬ ಅಭ್ಯರ್ಥಿಗೆ ವೇದಾಭ್ಯಾಸಕ್ಕಾಗಿ ಗರಿಷ್ಠ 5 ವರ್ಷ ಕಾಲ ಮಾತ್ರ ಈ ವೇತನಗಳನ್ನು ನೀಡಲಾಗುವುದು. ಆದ್ದರಿಂದ ಅಭ್ಯರ್ಥಿಯು ಇದುವರೆವಿಗೆ ಎಷ್ಟು ವರ್ಷ ವೇದಾಭ್ಯಾಸಕ್ಕಾಗಿ ವಿದ್ಯಾರ್ಥಿವೇತನವನ್ನು ಪಡೆದಿರುತ್ತಾನೆಂದು ಅರ್ಜಿಯಲ್ಲಿ ತಿಳಿಸಬೇಕು.

## MINDBENDER

**What rare quality do the following four words have in common?**

**facetious**
**abstemious**
**annelidous**
**arsenious**

## ANSWER

**One common answer was that the words end with 'ous'. This statement is true, but that is not a rare quality. Another common answer was that all the words contain all 5 Vowels. This is also true... but there is an even rarer quality. These words all contain all five vowels, each one exactly, once in alphabetical order.**

## ಬೆಟ್ಟದಪುರ ಸಂಕೇತಿ ಸಂಘ (ರಿ.)

ನಂ. 81, 12ನೇ ಮುಖ್ಯರಸ್ತೆ, ಬಿ.ಎಸ್.ಕೆ. 2ನೇ ಹಂತ, (ಬಿ.ಎನ್.ಎಂ. ಕಾಲೇಜು ಎದುರು)
ಬೆಂಗಳೂರು – 560 070.

### ವಿದ್ಯಾರ್ಥಿ ವೇತನದ ಅರ್ಜಿ ಪತ್ರ

2009 – 2010ನೇ ಸಾಲಿಗೆ

ಭಾವಚಿತ್ರ

ಕ್ರಮ ಸಂಖ್ಯೆ :

**ಸೂಚನೆ: ವಿದ್ಯಾರ್ಥಿ/ನಿಯ ತಂದೆ/ತಾಯಿ ಅಥವಾ ಪೋಷಕರು ಸಂಘದ ಆಜೀವ ಸದಸ್ಯರಾಗಿರಬೇಕು.**

1) ಅಭ್ಯರ್ಥಿಯ
   ಅ) ಹೆಸರು
   ಆ) ವಯಸ್ಸು
   ಇ) ವಿಳಾಸ

2) ತಂದೆ
   ಅ) ಹೆಸರು
   ಆ) ವಿಳಾಸ
   ಇ) ಉದ್ಯೋಗ

3) ತಾಯಿ
   ಅ) ಹೆಸರು
   ಇ) ಉದ್ಯೋಗ

3ಅ) ಮಕ್ಕಳು ಉದ್ಯೋಗಸ್ಥರೆ ? ಇದ್ದಲ್ಲಿ ವರಮಾನದ ವಿವರ :

ಈ) ವಾರ್ಷಿಕ ವರಮಾನ ಒಟ್ಟು (2+3+3ಅ)

ಉ) ಸರ್ಟಿಫಿಕೇಟ್ ಲಗತ್ತಿಸಿದೆಯೇ ?

ಊ) ಸಂಘದ ಆಜೀವ ಸದಸ್ಯರಾಗಿದ್ದಾರೆಯೇ ?

4) ವಿದ್ಯಾರ್ಥಿ ವ್ಯಾಸಂಗ ಮಾಡುತ್ತಿರುವ
   ಅ) ತರಗತಿ
   ಆ) ಶಾಲೆ / ಕಾಲೇಜು

5) ಅಭ್ಯರ್ಥಿಗೆ ಕಳೆದ ಸಾಲಿನಲ್ಲಿ ವಿದ್ಯಾರ್ಥಿ ವೇತನ ಕೊಟ್ಟಿದೆಯೇ ?





6) ಅಭ್ಯರ್ಥಿಯು ಎಷ್ಟು ವರ್ಷಗಳಿಂದ ವಿದ್ಯಾರ್ಥಿ ವೇತನವನ್ನು ಪಡೆದಿರುತ್ತಾನೆ/ಳೆ ?

7) ಸಂಘದ ಸ್ಥಳೀಯ ಪ್ರತಿನಿಧಿಯ ಶಿಫಾರಸ್ಸು ಮತ್ತು ಸಹಿ

8) ಶಾಲೆ/ಕಾಲೇಜುಗಳ ಮುಖ್ಯೋಪಾಧ್ಯಾಯರ/ ಪ್ರಿನ್ಸಿಪಾಲರ ಸರ್ಟಿಫಿಕೇಟ್ ಲಗತ್ತಿಸಿದೆಯೇ ?

9) ಅಭ್ಯರ್ಥಿಯು ತೇರ್ಗಡೆ ಹೊಂದಿದ ಹಿಂದಿನ ಪರೀಕ್ಷೆಯ ಅಂಕಪತ್ರ ಲಗತ್ತಿಸಿದೆಯೇ ?

10) ಇತರ ವಿವರಗಳು
    ಉದ್ಯೋಗದಲ್ಲಿರುವ ಸಹೋದರರು/ಸಹೋದರಿಯರು

11) ವಿದ್ಯಾಭ್ಯಾಸ ಮಾಡುತ್ತಿರುವ ಸಹೋದರರು/ಸಹೋದರಿಯರು

ಮೇಲ್ಕಂಡ ವಿವರಗಳು ನನಗೆ ತಿಳಿದ ಮಟ್ಟಿಗೆ ಸತ್ಯವಾಗಿದೆಯೆಂದು ಹೇಳುತ್ತೇನೆ.

ತಂದೆ/ತಾಯಿ/ಪೋಷಕರ ಸಹಿ          ಅಭ್ಯರ್ಥಿಯ ಸಹಿ
ಸ್ಥಳ :          ತಾ||

ಸಂಘದ ವಿದ್ಯಾರ್ಥಿವೇತನ ಯೋಜನೆಯ ನಿಯಮ ನಿಬಂಧನೆಗಳಿಗೆ ನಾನು ಒಪ್ಪಿರುತ್ತೇನೆ ಮತ್ತು ನನ್ನ ವಿದ್ಯಾಭ್ಯಾಸ ಪೂರ್ಣಗೊಂಡು ನಾನು ಉದ್ಯೋಗವನ್ನು ಕೈಗೊಂಡನಂತರ ಸಂಘದ ವಿದ್ಯಾರ್ಥಿವೇತನ ನಿಧಿಗೆ ನನ್ನ ಶಕ್ತಿ ಸಾಮರ್ಥ್ಯಕ್ಕನುಗುಣವಾಗಿ ಸಹಾಯವನ್ನು ಮಾಡುತ್ತೇನೆ.

ಸ್ಥಳ :          ಅಭ್ಯರ್ಥಿಯ ಸಹಿ

### ಕಾರ್ಯಾಲಯದ ದಾಖಲೆಗೆ

1) ಅರ್ಜಿಪತ್ರ ಸಂಘಕ್ಕೆ ತಲುಪಿದ ತಾರೀಖು..........................................

2) ಕಾರ್ಯಕಾರಿ ಸಮಿತಿಯ ತಾ||......................... ನ ಸಭೆಯಲ್ಲಿ ಅರ್ಜಿಯನ್ನು ಮಂಜೂರು ಮಾಡಲಾಗಿದೆ.

3) ವಿದ್ಯಾರ್ಥಿವೇತನವನ್ನು ಅಭ್ಯರ್ಥಿಗೆ ತಾ||.................................. ರಂದು .................... ಮೂಲಕ ಕಳುಹಿಸಿದೆ.

ಗೌರವ ಕಾರ್ಯದರ್ಶಿ

## ಮೈಸೂರು ವಿದ್ಯಾರ್ಥಿ ನಿಲಯದ ಸಭಾಂಗಣ : ಒಂದು ಸ್ಪಷ್ಟೀಕರಣ

ಸನ್ಮಾನ್ಯ ಸಂಕೇತಿ ಬಂಧುಗಳೆ,

ಕಳೆದ ನಮ್ಮ ಸಂಘದ 62ನೇ ವಾರ್ಷಿಕ ಸಭೆಯು ಮೈಸೂರಿನ ನಮ್ಮ ವಿದ್ಯಾರ್ಥಿ ನಿಲಯದ ಸಭಾಂಗಣದ ಬಗ್ಗೆ ಒಂದು ಮಹತ್ತರವಾದ ತೀರ್ಮಾನವನ್ನು ತೆಗೆದುಕೊಂಡಿದ್ದು, ತಮಗೆಲ್ಲರಿಗೂ ವೇದ್ಯವೇ ಆಗಿದೆ. ಇದರ ಬಗ್ಗೆ ನಮ್ಮ 61ನೇ ವಾರ್ಷಿಕ ಸಭೆಯಲ್ಲೂ ಸಾಕಷ್ಟು ಚರ್ಚೆಯಾಗಿ, ಆ ಚರ್ಚೆಯ ಮುಂದುವರಿಕೆಯಂತೆ, 62ನೇ ಸಭೆಯಲ್ಲೂ ಅದೇ ವಿಷಯ ಚರ್ಚೆಯಾಗಿ, ಈ ಸಭಾಂಗಣವನ್ನು, ಆಧುನಿಕವಾಗಿ ನಮ್ಮ ಸಮಕಾಲೀನ ಅವಶ್ಯಕತೆಗಳಿಗೆ ಅನುಕೂಲವಾಗುವಂತೆ, ನಿರ್ಮಿಸುವಂತೆ ಸಭೆಯು ಅಂತಿಮವಾಗಿ ತೀರ್ಮಾನಿಸಿತು. ಸಭೆಯ ಈ ಆದೇಶದ ಮೇರೆಗೆ ಕಾರ್ಯಕಾರಿ ಸಮಿತಿಯು ಈಗಾಗಲೆ ಕಾರ್ಯೋನ್ಮುಖವಾಗಿದೆ. ಈ ನಡುವೆ, ನಮಗೆ ಬರುತ್ತಿರುವ ಮೌಖಿಕ ವರದಿಗಳು ಹಾಗೂ ಪತ್ರಗಳ ಮುಖಾಂತರ ನಮಗೆ ತಿಳಿಯುತ್ತಿರುವಂತೆ, ನಮ್ಮ ಸಮಾಜದ ಹಲವಾರು ಬಂಧುಗಳಿಗೆ ಹಲವು ವಿಧದ ಅನುಮಾನಗಳು ತಲೆದೋರಿರುತ್ತವೆ. ಇಂತಹ ಹಲ ಕೆಲವು ಕಪೋಲ ಕಲ್ಪಿತ ಮಾತುಗಳಿಗೆ ಕಿವಿಗೊಡದೆ, ಸಂಘದ ಪುರೋಭಿವೃದ್ಧಿಗಾಗಿ ಮಾಡುತ್ತಿರುವ ಈ ಹೊಸ ನಿರ್ಮಾಣಕ್ಕೆ ತಾವೆಲ್ಲರೂ ಆಸಕ್ತರಾಗಿ ಸಹಕರಿಸಿ, ಪೂರಕವಾದ ಸಲಹೆಗಳನ್ನು ಕೊಟ್ಟು, ತನ್ಮೂಲಕ ನಮ್ಮ ಸಂಘದ ಅಭಿವೃದ್ಧಿಗೆ ಕಾರಣೀಭೂತರಾಗಬೇಕೆಂಬ ಒಂದೇ ಕಾರಣದಿಂದ ಈ ಲೇಖನವನ್ನು ಬಹುತೇಕ ಕಾರ್ಯಕಾರಿ ಸಮಿತಿಯ ಸದಸ್ಯರ ಮತ್ತು ಅಧ್ಯಕ್ಷರ ಪರವಾಗಿ ಬರೆಯುತ್ತಿದ್ದೇನೆ.

ತಮಗೆಲ್ಲರಿಗೂ ವೇದ್ಯವಾಗಿರುವಂತೆ ಈ ನಿರ್ಮಾಣವನ್ನು Build Operate Transfer ಆಧಾರದ ಮೇಲೆ ಮಾಡಬೇಕೆಂಬ ಉದ್ದೇಶವಿದೆ. ಒಂದುಸಲ ಇದಕ್ಕಿರುವ ವಿಕಲ್ಪವನ್ನೂ ಯೋಚಿಸೋಣ.

1ನೇ ವಿಕಲ್ಪ : ಈ ಸಭಾಂಗಣವನ್ನು ಯಾವುದೇ ರೀತಿಯಲ್ಲಿ ಅಭಿವೃದ್ಧಿಪಡಿಸದೆ, ಯಾವುದೇ ಆದಾಯವಿಲ್ಲದೆ, ''ಹಿಟ್ಟಿಗೆ ದಂಡ, ಭೂಮಿಗೆ ಭಾರ'' ಎಂಬಂತೆ ಉಳಿಸಿಕೊಳ್ಳುವುದು. ಲಕ್ಷಾಂತರ ರೂ ಬೆಲೆಬಾಳುವ ಈ ನಿವೇಶನವನ್ನು ಈ ರೀತಿ ವ್ಯರ್ಥವಾಗಿರಿಸಿಕೊಳ್ಳುವುದು ಯಾವ ಧರ್ಮ ? ಯಾರಿಗೆ ಲಾಭ ?

2ನೇ ವಿಕಲ್ಪ: ಈ ಕಟ್ಟಡವನ್ನು BOT ಆಧಾರವಿಲ್ಲದೆ, ಸಂಘವೇ ಸ್ವಂತ ಹಣದಿಂದ ಕಟ್ಟುವುದು. ಈಗ ನಾವು ಅಂದಾಜಿಸಿರುವ ಹಾಗೆ, ವಾಹನಗಳ ನಿಲುಗಡೆಗೆ ಕೆಳಹಂತ, ಊಟದ





ಮನೆಗಾಗಿ ನೆಲಹಂತ, ಸಭಾಂಗಣಕ್ಕಾಗಿ ಮೊದಲನೇ ಮಹಡಿ ಹೀಗೆ ಮೂರು ಹಂತದ ಕಟ್ಟಡಕ್ಕೆ ಸುಮಾರು 2 ಕೋಟಿ ರೂ.ಗಳಾಗುತ್ತವೆ. ಈ ಖರ್ಚನ್ನು ಸಂಘ ಭರಿಸಿ, ಇದನ್ನು ಲಾಭದಾಯಕವಾಗಿ ನಡೆಸಿ, ವಿದ್ಯಾರ್ಥಿ ನಿಲಯಕ್ಕೆ ಅನುಕೂಲವಾಗುವಂತೆ ನಡೆಸಲು ಸಾಧ್ಯವೆ? ನಾವು ಹಾಕಿದ ಹಣವನ್ನು ಹಿಂತೆಗೆಯಲು ಸಾಧ್ಯವೆ ? ಯೋಚಿಸಿ.

ಹಾಗಾಗಿ, ಮೇಲಿನ ಎರಡೂ ವಿಕಲ್ಪಗಳು ಸೂಕ್ತವಲ್ಲದ ಸಂದರ್ಭದಲ್ಲಿ ಈಗ ನಾವು ಯೋಚಿಸಿರುವ BOT ರೀತಿ ಸರಿಯಾದುದಲ್ಲವೆ ?

ಇನ್ನು ಈ BOT ರೀತಿಯ ಸಾಧಕ ಬಾಧಕಗಳನ್ನು ಯೋಚಿಸೋಣ.

1. ಮೊಟ್ಟ ಮೊದಲನೆಯದಾಗಿ, ಈಗ ಸಂಘಕ್ಕೆ ಆಗುತ್ತಿರುವ ನಷ್ಟದ ನಿಲುಗಡೆ.

2. ಎರಡನೆಯದಾಗಿ ಒಂದು ನಿರ್ಧಿಷ್ಟ ಅವಧಿಯನಂತರ ಸಂಘಕ್ಕೆ ಒಂದು ಅತ್ಯಾಧುನಿಕ ಸಭಾಂಗಣದ ಲಾಭ, ಅದೂ ಮೂರ್ಕಾಸೂ ಖರ್ಚಿಲ್ಲದೆ.

3. ಈ ನಿರ್ಧಿಷ್ಟ ಅವಧಿಯಲ್ಲೂ ಸಂಘಕ್ಕೆ ಒಂದು ನಿರ್ಧಾರಿತ ಲಾಭ, ಬಾಡಿಗೆಯ ರೂಪದಲ್ಲಿ ದೊರೆಯುತ್ತಿರುತ್ತದೆ.

4. ಇದೇ ಅವಧಿಯಲ್ಲಿ ವರ್ಷದ ಕೆಲವು ದಿನಗಳು ಈ ಸಭಾಂಗಣವನ್ನು ಸಂಘದ ಶಿಫಾರಸ್ಸಿನ ಮೇರೆಗೆ, ಸಂಘದ ಆಯ್ದ ಸದಸ್ಯರುಗಳಿಗೆ ಕಡಿಮೆ ದರದಲ್ಲಿ ಬಾಡಿಗೆಗೆ ದೊರಕುವಂತೆ ಮಾಡುವ ಯೋಚನೆಯೂ ಇದೆ.

4. ನಾಲ್ಕನೆಯದಾಗಿ ಈ BOT ಆಧಾರದಲ್ಲಿ ನಾವು ಇದನ್ನು ಕೊಡಲು ಯೋಚಿಸಿರುವುದೂ ಯಾರಾದರೂ ಸೂಕ್ತ ಸಂಕೇತಿ ಉದ್ಯಮಿಗೆ ಮಾತ್ರವೆ !

ಕೆಲವರು ಅನುಮಾನಿಸಿರುವ ಮುಖ್ಯವಾದ ಇನ್ನೊಂದು ಅಂಶವೆಂದರೆ ಈಗಿನ ಕಟ್ಟಡಕ್ಕೆ ಹಲವಾರು ಸಂಕೇತಿ ಗಣ್ಯರು ಕೊಡುಗೆಯನ್ನು ನೀಡಿದ್ದು, ಈ ಕಟ್ಟಡ ಒಡೆದರೆ, ಅವರುಗಳ ಹೆಸರಿಲ್ಲದಂತಾಗುತ್ತದೆ ಎಂಬುದು. ಇದಕ್ಕೂ ಸಹ ಸಂಘವು ತೀರ್ಮಾನಿಸಿರುವುದೇನೆಂದರೆ, ಈಗಿನ ಕಟ್ಟಡಕ್ಕೆ ಕೊಡುಗೆಯನ್ನು ನೀಡಿರುವ ಪ್ರತಿಯೊಬ್ಬ ದಾನಿಯ ಹೆಸರನ್ನೂ, ನೂತನ ಕಟ್ಟಡದಲ್ಲೂ ಈಗಿರುವಂತೆಯೇ ಗ್ರ್ಯಾನೈಟ್ ಶಿಲೆಯಲ್ಲಿ ಕೆತ್ತಿಸಿ, ಸೂಕ್ತ ಸ್ಥಳದಲ್ಲಿ ಪ್ರತಿಷ್ಠಾಪಿಸುವುದು.

ಈಗ ದಯವಿಟ್ಟು ಎಲ್ಲಾ ಸಂಕೇತಿ ಬಂಧುಗಳೂ ಯೋಚಿಸಿ, ನಾವು ತೆಗೆದುಕೊಂಡಿರುವ ತೀರ್ಮಾನದಲ್ಲಿ ಯಾವ ತಪ್ಪಿದೆ? ಯಾವುದನ್ನೇ ಆಗಲಿ ನೂತನವಾಗಿ ನಿರ್ಮಿಸುವುದೇ ತಪ್ಪೆ? ಸರ್ವ ಸದಸ್ಯರ ಸಭೆಯಲ್ಲಿ ಆದ ತೀರ್ಮಾನಕ್ಕೂ ಬೆಲೆ ಇಲ್ಲವೆ ? ಯೋಚಿಸಿ ? ಕೇವಲ ಬೆರಳೆಣಿಕೆಯ ಕೆಲವರು, ಪೂರ್ವಾಗ್ರಹ ಪೀಡಿತರಾಗಿ, ಇಲ್ಲಸಲ್ಲದ ಅಪಪ್ರಚಾರದಲ್ಲಿ ತೊಡಗಿರುವುದು ಬಹಳ ದುಃಖದಾಯಕ. ನಮ್ಮ ಸಂಘದ ಮೇಲಿನ ಕಳಕಳಿಯಿಂದ ಒಂದು ನೂತನ ಸಭಾಂಗಣವನ್ನು ನಿರ್ಮಿಸಲು ಉತ್ಸುಕರಾಗಿ ಕೆಲಸ ಮಾಡುತ್ತಿರುವವರಿಗೆ, ಅಡ್ಡಗಾಲು ಹಾಕುವುದು ಸರ್ವಥಾ ನ್ಯಾಯವಲ್ಲ.

ಇನ್ನು ಕೆಲವರಿಗಂತೂ ಕೋರ್ಟು-ಕಛೇರಿ ಎಂಬುದು ಮಾತೆತ್ತಿದರೆ ಸಾಕು ನಾಲಿಗೆಯ ತುದಿಯಲ್ಲೇ ಇರುತ್ತದೆ. ಇಂಥವರಿಗೆ ನಾವು ಹೇಳುವುದು ಒಂದೇ ಮಾತು. ನಿಮಗೆ ಯಾವುದೇ ಅನುಮಾನಗಳಿದ್ದರೆ, ಬನ್ನಿ , ಪರಿಹರಿಸಿಕೊಳ್ಳಿ. ವಾಮಮಾರ್ಗವನ್ನು ಬಿಡಿ. ಕಾನೂನು, ಕೋರ್ಟು, ಕಛೇರಿ ನಮಗೂ ತಿಳಿದಿದೆ. ಆದರೆ ನಮ್ಮನಿಮ್ಮೆಲ್ಲರ ದುರಭಿಮಾನಕ್ಕಿಂತ ಸಂಘದ ಅಭಿವೃದ್ಧಿ ಮುಖ್ಯ. ಅದಕ್ಕೆ ಸಹಕರಿಸಿ. ನಮ್ಮ ಹಿರಿಯರು ಗಳಿಸಿಕೊಟ್ಟಿರುವ ಆಸ್ತಿಯನ್ನು, ಕೋರ್ಟು ಕಛೇರಿಯ ಕ್ಯಾತೆ ಜಗಳಕ್ಕೆ ಹೋಗದೆ, ಒಳ್ಳೆಯ ರೀತಿಯಲ್ಲಿ ರೂಢಿಸಿಕೊಳ್ಳುವತ್ತ ಗಮನಹರಿಸಿ. ತನ್ಮೂಲಕ ನಮ್ಮ ಸಮಾಜಕ್ಕೆ ಒಳ್ಳೆಯದಾಗುವಂತೆ ಮಾಡಿ. ನಮ್ಮಿಂದ ತಪ್ಪಾಗಿದ್ದರೆ ತೋರಿಸಿ ಸರಿಪಡಿಸಿ ಮುಂದುವರಿಯೋಣ. ಕೋರ್ಟು, ಕಛೇರಿ, ಮೂಕರ್ಜಿ ಸಂಸ್ಕೃತಿಯನ್ನು ಬಿಡಿ. ಹಾಲಿ ಇರುವ ಕಟ್ಟಡವು ಅತ್ಯಾಧುನಿಕವಾಗಿಲ್ಲದೆ, ಗ್ರಾಹಕರು ಆಕರ್ಷಿತರಾಗುತ್ತಿಲ್ಲದ ಕಾರಣ, ಆದಾಯವೂ ಇಲ್ಲದೆ ಸೊರಗುತ್ತಿರುವ ಕಾರಣ ಹೊಸ ಕಟ್ಟಡವನ್ನು ಕಟ್ಟಲು, ಸರ್ವಸದಸ್ಯರ ಸಭೆಯೇ ತೀರ್ಮಾನಿಸಿದೆ. ಇದಕ್ಕೆ ಬೇರೆ ಯಾವುದೇ ಪ್ರಮಾಣ ಪತ್ರದ ಅವಶ್ಯಕತೆ ಇದೆ ಎಂದು ಎನಿಸುತ್ತಿದೆಯೆ ? ನಮ್ಮ ಸಂಕೇತಿ ಬಂಧುಗಳೇ ಈ ಸಭಾಂಗಣವನ್ನು ಉಪಯೋಗಿಸುತ್ತಿಲ್ಲದಿರುವಾಗ, ಇದನ್ನು ಹೊಸದಾಗಿ ಕಟ್ಟುವುದು ನಮ್ಮವರೆಲ್ಲಾ ಉಪಯೋಗಿಸುವಂತೆ ಮಾಡುವುದು ತಪ್ಪೆ?

– ಎಸ್. ಸಿ. ಮಂಜುನಾಥ್





## ಬೆಂಗಳೂರು ಸಂಕೇತಿ ಮಹಿಳಾ ಸಮಾಜ ಟ್ರಸ್ಟ್ (ರಿ.)

### ಸಂಕೇತಿಗಳಿಗೆ ಸಂಗೀತ ಸ್ಪರ್ಧೆ

ದಿನಾಂಕ : ಅಕ್ಟೋಬರ್ 18, 2009

ಸ್ಥಳ : ಜಯರಾಮ ಸೇವಾ ಮಂಡಳಿ
492/ಎ, 1ನೇ ಮುಖ್ಯರಸ್ತೆ, 8ನೆ ಬ್ಲಾಕ್,
ಜಯನಗರ, ಬೆಂಗಳೂರು - 82
ದೂ : 22445232

| | |
|---|---|
| ದೇವರ ನಾಮ ಸ್ಪರ್ಧೆ (ಅವಧಿ 3 ನಿಮಿಷ) | ಶಾಸ್ತ್ರೀಯ ಸಂಗೀತ (ಅವಧಿ 3 ನಿಮಿಷ) |
| (ಬೆಳಿಗ್ಗೆ 10ರಿಂದ 12.30ರವರೆಗೆ) | (ಮಧ್ಯಾಹ್ನ 1.30ರಿಂದ 4 ಗಂಟೆಯವರೆಗೆ) |
| (ವಯೋಮಿತಿ 6ರಿಂದ 12) | (ವಯೋಮಿತಿ 12ರಿಂದ 18 ವರ್ಷ) |
| ಸ್ಪರ್ಧಿಯ ಹೆಸರು : | ಸ್ಪರ್ಧಿಯ ಹೆಸರು : |
| ತಂದೆ-ತಾಯಿಯ ಹೆಸರು : | ತಂದೆ-ತಾಯಿಯ ಹೆಸರು : |
| ವಿಳಾಸ ಮತ್ತು ದೂರವಾಣಿ : | ವಿಳಾಸ ಮತ್ತು ದೂರವಾಣಿ : |
| ಸ್ಪರ್ಧಿಯ ವಯಸ್ಸು : | ಸ್ಪರ್ಧಿಯ ವಯಸ್ಸು : |
| ಹಾಡಬಯಸುವ ಯಾವುದಾದರೂ 3 ದೇವರನಾಮಗಳು | ಹಾಡಬಯಸುವ ಯಾವುದಾದರೂ 3 ಕೃತಿಗಳು |
| ಎ) ರಚನೆ : | ಎ) ರಚನೆ : |
| ಬಿ) ರಾಗ : | ಬಿ) ರಾಗ : |
| ಸಿ) ತಾಳ : | ಸಿ) ತಾಳ : |

ವಿ.ಸೂ.:1. ಸ್ಪರ್ಧಿಯ ತಂದೆ/ತಾಯಿ ಸಂಕೇತಿಯಾಗಿರಬೇಕು. 2. ಈ ವಿವರಗಳನ್ನೊಳಗೊಂಡ ಅರ್ಜಿಯೊಂದಿಗೆ ವಯಸ್ಸಿನ ದೃಢೀಕರಣ ಪತ್ರ ಇರಬೇಕು. 3. ಸ್ಪರ್ಧಿಯ ಸ್ಪರ್ಧೆ ಪ್ರಾರಂಭವಾಗುವ ಅರ್ಧ ಗಂಟೆ ಮುಂಚೆ ಬಂದು ತಮ್ಮ ಹಾಜರಾತಿಯನ್ನು ದೃಢೀಕರಿಸಬೇಕು. 4. ಪ್ರವೇಶ ಧನ ರೂ. 50/-. 5. ಅರ್ಜಿ ನೀಡಿ ಭಾಗವಹಿಸದಿದ್ದಲ್ಲಿ ಪ್ರವೇಶಧನ ವಾಪಸ್ಸಾಗುವುದಿಲ್ಲ. **6. ದೇವರನಾಮ ಸ್ಪರ್ಧೆಗೆ ಮೊದಲ 25 ಜನರಿಗೆ ಮಾತ್ರ ಅವಕಾಶ. 7. ಶಾಸ್ತ್ರೀಯ ಸಂಗೀತಕ್ಕೆ ಮೊದಲ 15 ಜನರಿಗೆ ಮಾತ್ರ ಅವಕಾಶ.** 8. ನೀವು ಬರೆದು ಕಳುಹಿಸಿರುವ 3 ಕೃತಿಗಳಲ್ಲಿ ಯಾವುದಾದರೂ ಒಂದು ಹಾಡು/ಕೃತಿಯನ್ನು

ಹಾಡಿಸಲಾಗುವುದು. 9. ಶಾಸ್ತ್ರೀಯ ಸಂಗೀತದಲ್ಲಿ ಆಲಾಪನೆ, ಕೃತಿ, ಸ್ವರ ಎಲ್ಲಕ್ಕೂ ಆದ್ಯತೆ ಉಂಟು. 10. ನಿಮ್ಮ ಅರ್ಜಿ ನಮಗೆ **ಸೆಪ್ಟಂಬರ್ 15ರೊಳಗೆ** ತಲುಪಬೇಕು. 11. ಸ್ಪರ್ಧಿಯ ಇತ್ತೀಚಿನ ಭಾವಚಿತ್ರವನ್ನು ಲಗತ್ತಿಸಬೇಕು.

ನಿಮ್ಮ ಅರ್ಜಿಗಳು ತಲುಪಬೇಕಾದ ವಿಳಾಸ :

| | |
|---|---|
| ದೇವರನಾಮ : | ಶಾಸ್ತ್ರೀಯ ಸಂಗೀತ : |
| ಗಾಯತ್ರಿ ರಾವ್ | ನಳಿನಿ ನಟರಾಜ್ |
| ನಂ. 4'ಎ', ಎಂ.ಎನ್.ಕೆ. ರಾವ್ ರಸ್ತೆ | ನಂ. 210, 45ನೇ ಅಡ್ಡರಸ್ತೆ, 8ನೇ ಬ್ಲಾಕ್ |
| ಬಸವನಗುಡಿ, ಬೆಂಗಳೂರು – 04 | ಜಯನಗರ, ಬೆಂಗಳೂರು – 82 |
| ದೂ : 26570492, 9980481245 | ದೂ : 26645662, 9841788795 |

ರು. ಕೃ. ಗೀತಾಮಣಿ
ಮ್ಯಾನೇಜಿಂಗ್ ಟ್ರಸ್ಟೀ
ದೂ : 26695657

## *Change of Address*

**S. C. Manjunatha**
**Sandhya**
No. 30, Thulaja Bhavani Nilaya, 1st Floor, 13th Main,
Motappa Garden, Raghavendra Extn., Hosakerehalli,
Bangalore - 560 085
Ph : 22797850, 9731988788

**R. K. Raghavan,** Vainika Vidwan
No. 2938, Diagonal Road, Behind Sanmathi Stores,
Chamundipuram, Mysore - 570 004
Ph : 9880918340

**Uma Sathyanarayana**
No. 104, 'B' Block, Giri Apts., 2nd Phase,
J. P. Nagar, Bangalore - 560 078
Ph : 26597410





# Kamala Avadhany Memorial Award

## *Carnatic Classical Music Competition*

### *Announcement*

Like Previous three years, KamalaT Avadhany foundation will be conducting the music competition for children below fifteen years. We urge every one to encourage children with talent by sponsoring them to participate in the event which will be held this year on **Sunday, 04th October 2009.** Venue will be intimated in next issue.

Rules and Regulations

1. This competition is open for students from all over Karnataka.
2. Candidates have to send audiocassettes and selection will be based on the audio tapes. Only one song to be rendered with voice and tambura support.
3. The Competition will be in the category of Carnatic Vocal only.
4. Children should be below 15 years of age as on 1st October 2009. i.e. only children born after 1st October 1993 are eligible to participate. We would require birth certificate & also proof of class in which the child is presently studying (a copy of marks card or receipt of the fees paid)
5. The candidates should indicate a list of five compositions (krithis). Choice of Krithis selected will also carry weightage in awarding marks. Judges may ask the participant to elaborate one Raga, sing krithi in another Raga and do swaraprastara in the third. Viva - Voce on fundamentals of Carnatic music will be conducted in case the Judges feel the need for it.
6. The choice of the song (amongst the list submitted) to render rests completely with the judges.

7. The candidates may render the composition, elaborating with Raga, neraval and swaraprasthara.
8. The duration allotted is 10 minutes for each candidate. Exceeding the time limit will invite disqualification.
9. The candidates have to make their own arragements to bring tambura. (They are welcome to bring manual tambura along with a person to play at their own cost.) No other accompanying support will be permitted.
10. The candidates have to make their own arrangements to come to the venue.
11. The Candidates must be present at the venue 15 minutes before the commencement of the competition and confirm their presence.
12. Since the entries are being restricted to 20 participants only, the participants desirous of competing should register their names by filling the enclosed application form along with a refundable deposit of Rs. 250/- by Cheque in favour of Bettadapura Sankethi Sangha, Bangalore This amount will be refunded to the participants at the venue after his/ her participation. Cheques will be returned to those candidates who are not selected for the competition. However the selected candidates forfeit their deposit if they do not participate in the competition for any reason whatsoever.
13. Prizes : Three cash prizes will be awarded,

    1st Prize - Rs. 6000/- 2nd Prize Rs. 3000/- Consolation Prize Rs.1000/-In addition all the participants will be given articles related to music to enhance their knowledge and interest in classical music.

    **However, in the opinion of the judges, if the participants' performance does not reach the desired standards, no prizes will be awarded.**





14. Applications may be submitted before **25th August 2009.** The twenty finalists will be informed of the selection by **1st week of September 2009** so that they have reasonable time to practice.
15. The decision of the judges shall be final and no objections will be entertained in this regard.

<u>The sponsors may amend the rules if in their opinion helps in the better conduct of the program</u>

V.T. Avadhany
160, Ramaswamy Layout, IInd Block
Nanjangud - 571 301
08221-228592
984557062, 9845294959

**Our Contacts :**

Dr. Sandhya Avadhany
Professor and Head
Department of Physiology
St. John's Medical College
Bangalore - 560 034

**Phone No.**
Office : 080-22065060
Res : 080 - 25530928
Mob.: 9449544740

e-mail:sandhyaavadhany@yahoo.com v.t.avadhany@gmail.com

Duly filled application forms along with cassette, cheque and self addressed stamped envelope to be sent to Dr. Sandhya Avadhany at the contact address given above. The application can also be handed over in person and entrance fee in cash if the participants so desire.

# Kamala Avadhany Memorial Award

## CARNATIC CLASSICAL MUSIC COMPETITION

**Application form**

Photograph

Name of the participant:

Father's / Guardian's Name :

Age as on date :

Date of Birth :

Name of the Guru / Gurus :

Enclose list of 5 Krithis selected {Raga, Tala and Composer to be indicated}:

1.

2.

3.

4.

5.

Address for correspondence :

Phone No.: Cell No.: E-mail:

The information provided by me is true to the best of my knowledge & I abide by the rules for this competition.

Signature of the Parent / Guardian

Signature of the Participant

Date:

Place

Signature of the Headmaster





## ರಾಷ್ಟ್ರ ಚೇತನ ಪ್ರಶಸ್ತಿ ಪ್ರದಾನ

ಸಂಗೀತ ಕ್ಷೇತ್ರದಲ್ಲಿ ಸಲ್ಲಿಸಿದ ಅನುಪಮ ಸೇವೆಗಾಗಿ ಹೆಸರಾಂತ ವೈಣಿಕ ಪ್ರವೀಣ, ಗಾನ ಕಲಾ ಭೂಷಣ, ಆಸ್ಥಾನ ವಿದ್ವಾನ್ ಶ್ರೀ ಆರ್. ಎಸ್. ಕೇಶವ ಮೂರ್ತಿಯವರ ಪುತ್ರರಾಗಿರುವ ವೈಣಿಕ ರತ್ನ , ವೀಣಾವಿಶಾರದ, ವೀಣಾಸ್ವರ ವಿಲಾಸಿ, ನಮ್ಮವರೇ ಆದ ವಿದ್ವಾನ್ ಆರ್. ಕೆ. ಪದ್ಮನಾಭ (ಮೈಸೂರು) ಇವರಿಗೆ



''ರಾಷ್ಟ್ರ ಚೇತನ ಪ್ರಶಸ್ತಿ'' ಯನ್ನು 27ನೇ ಜೂನ್ 2009ರಂದು ಕರ್ನಾಟಕ ಪ್ರತಿಭಾ ವರ್ಧಕ ಅಕಾಡೆಮಿ ಆಯೋಜಿಸಿದ್ದ ಪ್ರತಿಭೋತ್ಸವ 2008ರ ಅಭಿನಂದನಾ ಸಮಾರಂಭದಲ್ಲಿ ಸಂಜೆ ಶ್ರೀ ಶ್ರೀ ಶ್ರೀ ಮಧುಸೂದನಾ ನಂದಪುರಿ ಮಹಾ ಸ್ವಾಮೀಜಿ, ಪೀಠಾಧಿಪತಿಗಳು, ಓಂಕಾರ ಆಶ್ರಮ, ಹಾಗೂ ಸನ್ಮಾನ್ಯ ಕುಮಾರಿ ಶೋಭಾ ಕರಂದ್ಲಾಜೆ, ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು, ಕ.ರಾ.ಸ. ಇವರುಗಳ ಮುಖ್ಯ ಅತಿಥಿಗಳ ನೇತೃತ್ವದಲ್ಲಿ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರದಾನ ಮಾಡಲಾಯಿತು. 'ರಾಷ್ಟ್ರ ಚೇತನ' ಪ್ರಶಸ್ತಿ ಪುರಸ್ಕಾರ ಬಂದಿರುವುದು ನಮ್ಮ ಸಂಕೇತಿ ಬಾಂಧವರಿಗೆಲ್ಲ ಸಂತೋಷವಾಗಿದೆ.

## ಸ್ವಾತಿ ಪುರಸ್ಕಾರ್ ಪ್ರಶಸ್ತಿ ಪ್ರದಾನ

ಕರ್ನಾಟಕ ಸಂಗೀತ ಕ್ಷೇತ್ರದಲ್ಲಿ ಧ್ರುವತಾರೆಯಂತೆ ಪ್ರಕಾಶಿಸುತ್ತಿರುವ



ಅಂತರಾಷ್ಟ್ರ ಖ್ಯಾತಿಯ ಮೇರು ಕಲಾವಿದ 90ರ ಹರೆಯದ ಸಂಗೀತ ಕಲಾನಿಧಿ, ಡಾ|| ಆರ್. ಕೆ. ಶ್ರೀಕಂಠನ್ ಅವರಿಗೆ 2008ನೇ ಸಾಲಿನ ಕೇರಳ ಸರ್ಕಾರದ ಪ್ರತಿಷ್ಠಿತ 'ಸ್ವಾತಿ ಪುರಸ್ಕಾರ್ ಪ್ರಶಸ್ತಿ'ಯು ದೊರಕಿರುವುದು ಅತ್ಯಂತ ಹೆಮ್ಮೆಯ ವಿಷಯವಾಗಿದೆ.

1 ಲಕ್ಷ ನಗದು, ಸನ್ಮಾನ ಪತ್ರ, ಪಾರಿತೋಷಕ ಮತ್ತು ಶಾಲನ್ನು ಒಳಗೊಂಡ ಈ ಪ್ರಶಸ್ತಿಯನ್ನು ಕೇರಳದ ತ್ರಿಪುನಿತೂರ ಎಂಬ ಊರಿನಲ್ಲಿ ಕೇರಳ ಸರ್ಕಾರದ ಮಾನ್ಯ ಶಿಕ್ಷಣ ಮತ್ತು ಸಂಸ್ಕೃತಿ ಸಚಿವರಾದ ಶ್ರೀ ಎಂ. ಎ. ಬೇಬಿ ಅವರು ನೀಡಿ ಗೌರವಿಸಿದರು. ಪ್ರಶಸ್ತಿ ಪ್ರದಾನವಾದಮೇಲೆ ಶ್ರೀಕಂಠನ್ ಮತ್ತು ವಿದ್ವಾನ್ ರಮಾಕಾಂತ್ ಅವರ ಅಮೋಘ ಸಂಗೀತ ಕಛೇರಿಯು ಕಿಕ್ಕಿರಿದ ಅಪಾರ ಸಂಗೀತ ಪ್ರೇಮಿಗಳ ಮನಸೂರೆಗೊಂಡಿತು.

ಇದೇ ಸಂದರ್ಭದಲ್ಲಿ ಡಾ|| ಆರ್. ಕೆ. ಶ್ರೀಕಂಠನ್ ಅವರನ್ನು ಮಂತ್ರಾಲಯದ ''ಆಸ್ಥಾನ ವಿದ್ವಾಂಸ''ರನ್ನಾಗಿ ಆಯ್ಕೆ ಮಾಡಿದ್ದಾರೆ. ಈ ಪ್ರಶಸ್ತಿಯನ್ನು ಬರುವ ರಾಘವೇಂದ್ರ ಸ್ವಾಮಿಗಳ ಆರಾಧನಾ ಮಹೋತ್ಸವದ ಸಮಯದಲ್ಲಿ ಮಂತ್ರಾಲಯದ ಸಂಸ್ಥಾನದವರು ನೀಡುವವರಿದ್ದಾರೆ.

## MINDBENDER

**While I am in air, I am not in oxygen.**
**I am also in water, but not in hydrogen.**
**I am necessary in all animals,**
**but you won't find me in the zoo.**
**Look in all brains and you'll find me there too.**
**What am I?**

**Ans. : The Letter A**





## ''ವ್ಯಾಸಜ್ಯೋತಿ'' ಪ್ರಶಸ್ತಿ ಪ್ರದಾನ

ಬೆಂಗಳೂರಿನ ಜ್ಯೋತಿ ಸಾಂಸ್ಕೃತಿಕ ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯರವರು ಗುರುಪೂರ್ಣಿಮೆಯಂದು ಶೃಂಗೇರಿ ಶ್ರೀ ಮಠೀಯ ಆಸ್ಥಾನ ವಿದ್ವಾಂಸರಾದ ಶ್ರೀ ಬಿ. ಗಣೇಶ ಭಟ್ಟರಿಗೆ ''ವ್ಯಾಸಜ್ಯೋತಿ'' ಪ್ರಶಸ್ತಿಯೊಂದಿಗೆ ರೂ. 25,000/- ಗೌರವ ಸಂಭಾವನೆಯನ್ನು ನೀಡಿ ಗೌರವಿಸಿದರು.

ಕಾರ್ಯಕ್ರಮದ ಆರಂಭದಲ್ಲಿ ವೇ|| ಬ್ರ|| ಶ್ರೀ ಸೋ. ತಿ. ನಾಗರಾಜರವರು ಮಾತನಾಡುತ್ತ ಜ್ಯೋತಿ ಸಾಂಸ್ಕೃತಿಕ ಪ್ರತಿಷ್ಠಾನವು ಭಾರತೀಯ ಸಂಸ್ಕೃತಿಯ ಉತ್ಥಾನಕ್ಕಾಗಿ ಅನೇಕ ಯೋಜನೆಗಳನ್ನು ಹಾಕಿಕೊಂಡಿದ್ದು ಕಳೆದ ಒಂಭತ್ತು ವರ್ಷಗಳಿಂದ ವ್ಯಾಸಪೂರ್ಣಿಮೆಯ ದಿನವನ್ನು ''ವ್ಯಾಸವಂದನಾ'' ಎಂದು ವಿಶಿಷ್ಟರೀತಿಯಲ್ಲಿ ಆಚರಿಸುತ್ತಿದೆ. ಪರಕ ಕಾರುಣಿಕರಾದ ವೇದವ್ಯಾಸರು ಸಮಸ್ತ ಜೀವಿಗಳ ಉದ್ಧಾರಕ್ಕಾಗಿ ವೇದಗಳ ವಿಭಾಗ ಮಾಡಿ, ಬ್ರಹ್ಮಸೂತ್ರಗಳನ್ನು ಹದಿನೆಂಟು ಪುರಾಣಗಳನ್ನು ಹಾಗೂ ಮಹಾಭಾರತಾದಿ ಗ್ರಂಥಗಳನ್ನು ರಚಿಸಿ ಈ ದೇಶದಲ್ಲಿ ಜ್ಞಾನದ ಬೆಳಕನ್ನು ಪಸರಿಸಿದ್ದಾರೆ. ಅವರ ಲೋಕೋತ್ತರ ಕೊಡುಗೆಗೆ ಪ್ರತಿಯಾಗಿ ನಮ್ಮಿಂದ ವಂದನೆಯ ಹೊರತಾಗಿ ಇನ್ನೇನನ್ನೂ ಸಲ್ಲಿಸಲು ಸಾಧ್ಯವಿಲ್ಲ. ವ್ಯಾಸರು ರಾಷ್ಟ್ರಕರಾಗಿ ಈ ರಾಷ್ಟ್ರದಲ್ಲಿ ಆಧ್ಯಾತ್ಮದ ಚೈತನ್ಯ ಪ್ರವಾಹವನ್ನು ಹರಿಸಿದ ಮಹಾಮಹಿಮರು. ಪ್ರಪಂಚದಲ್ಲಿ ಇಂದಿಗೂ ಭಾರತಕ್ಕೆ ಒಂದು ವಿಶಿಷ್ಟಸ್ಥಾನವಿದೆ ಎಂದಾದರೆ ಅದು ಇಂತಹ ಮಹಾತ್ಮರ ಆಧ್ಯಾತ್ಮ ಧಾರೆಯಿಂದ. ಈ ಭೂಮಿ ಇಷ್ಟು ಪವಿತ್ರವಾಗಿರಲು ಇದೇ ಕಾರಣ. ಜಗತ್ತನ್ನು ಭಾರತವನ್ನು ತುಲನೆ ಮಾಡಿದರೆ ಈ ಆಧ್ಯಾತ್ಮ ಅಂಶದಿಂದಲೇ ಭಾರತವೂ ಪ್ರತ್ಯೇಕ ಗೌರವಕ್ಕೆ ಪಾತ್ರವಾಗಿದೆ. ಆಧ್ಯಾತ್ಮ ಜೀವನಕ್ಕನುಗುಣವಾಗಿ ಭೌತಿಕ ಮೂಲ ತಿಳಿಸಿದವರು ವ್ಯಾಸರು. ವ್ಯಾಸರನ್ನು ಇಂದು ನಾವು ಪ್ರತ್ಯೇಕವಾಗಿ ಕಾಣಲು ಸಾಧ್ಯವಿಲ್ಲದ ಕಾರಣ ಅಂತಹ ಸಾಧನೆಯನ್ನು ಮಾಡಿದ ವಯೋವೃದ್ಧರೂ ಹಾಗೂ ಜ್ಞಾನವೃದ್ಧರೂ ಆದ ವಿದ್ವಾಂಸರನ್ನೂ ವ್ಯಾಸರ ಪ್ರತಿನಿಧಿ ಎಂಬುದಾಗಿ ಭಾವಿಸಿ ''ವ್ಯಾಸಜ್ಯೋತಿ'' ಪ್ರಶಸ್ತಿಯನ್ನೂ ನೀಡಿ ಪ್ರತಿಷ್ಠಾನವು ಗೌರವಿಸುತ್ತಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ವಿದ್ವಾನ್ ಸೂರ್ಯನಾರಾಯಣ ಭಟ್ಟರು ವಿಶೇಷ ಉಪನ್ಯಾಸ ಮಾಡಿ – ವ್ಯಾಸರು ವೇದವನ್ನು ಋಗ್ವೇದ, ಯಜುರ್ವೇದ, ಸಾಮವೇದ ಹಾಗೂ ಅಥರ್ವಣ

ವೇದವೆಂದು ಅರ್ಥಕ್ಕನುಗುಣವಾಗಿ ವಿಭಾಗ ಮಾಡಿ ವಿಶಾಲ ಬುದ್ಧಿ ಮತ್ತು ಅಪಾರ ಮೇಧಾಶಕ್ತಿಯಿಂದ ಮೆರೆದಿದ್ದಾರೆ. ಅಲ್ಲದೇ ಮಹಾಭಾರತವನ್ನು ರಚಿಸುವಾಗ ಮಧ್ಯೆಮಧ್ಯೆ ಕೂಟ ಶ್ಲೋಕಗಳನ್ನು ರಚಿಸಿ ಲಿಪಿಕಾರನಾದ ಗಣಪತಿ ದೇವರೂ ಸಹ ಕ್ಷಣಕಾಲ ಆಲೋಚನೆ ಮಾಡಿ ಬರೆಯುವಂತೆ ಮಾಡಿದ ಮಹಾಚಾಣಾಕ್ಯರು. ಜ್ಯೋತಿ ಸಾಂಸ್ಕೃತಿಕ ಪ್ರತಿಷ್ಠಾನವು ''ವ್ಯಾಸವಂದನಾ'' ಎಂಬ ಕಾರ್ಯಕ್ರಮದ ಮೂಲಕ ವ್ಯಾಸರಿಗೆ ನಮನ ಸಲ್ಲಿಸುತ್ತಿರುವುದು ಅರ್ಥವತ್ತಾಗಿದೆ. ರಾಷ್ಟ್ರದಲ್ಲಿರುವವರೆಲ್ಲರೂ ವ್ಯಾಸರನ್ನು ಸ್ಮರಿಸಿ ವಂದಿಸಬೇಕಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮವು ಮಲ್ಲಿಕಾರ್ಜುನ ಪಾಠಶಾಲೆಯ ವಿದ್ಯಾರ್ಥಿಗಳ ವೇದಘೋಷ, ಶ್ರೀಮತಿ ಆರ್.ಕೆ. ಗೀತಾಮಣಿ ಹ.ವೆಂ. ಶ್ರೀನಿವಾಸ ಅವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾಗಿ ಶ್ರೀಯುತ ಎಂ. ನರಸಿಂಹನ್ ಅವರ ವಂದನಾರ್ಪಣೆಯೊಂದಿಗೆ ಮುಕ್ತಾಯವಾಯಿತು.

## ಸನ್ಮಾನ

**ಪ್ರೊ|| ಆರ್. ವಿ. ಪ್ರಭಾಕರ ಅವರಿಗೆ ಈ ವರ್ಷದ ''ಆರ್ಯಭಟ ಪ್ರಶಸ್ತಿ'' ದೊರಕಿದೆ ಎಂಬುದು ನಮ್ಮೆಲ್ಲರಿಗೂ ಸಂತಸ ತರುವ ವಿಷಯ.**



ಇವರಿಗೆ ಸಂಘದ ತುಂಬು ಹೃದಯದ ಅಭಿನಂದನೆಗಳು





## ವಾರ್ತಾ ನಿಧಿ

ಸಂಘದ ಸದಸ್ಯರ ನಡುವೆ ಮುಖ್ಯಸಂಪರ್ಕ ಸೇತುವೆಯಾಗಿರುವ ಸಂಘದ ಚಟುವಟಿಕೆಗಳ ಮುಖವಾಣಿಯಾಗಿರುವ ಬಾಂಧವರ ಪ್ರತಿಭೆಗಳಿಗೆ ಒಂದು ಕನ್ನಡಿಯಂತಿರುವ ನಿಮ್ಮ 'ಸಂಕೇತಿ ವಾರ್ತಾ'ವನ್ನು ಸದೃಢಗೊಳಿಸಿ, ಗಟ್ಟಿಯಾಗಿ ತನ್ನ ಕಾಲಮೇಲೆ ನಿಲ್ಲುವಂತೆ ಮಾಡುವ ಹೊಣೆ ನಮ್ಮ-ನಿಮ್ಮೆಲ್ಲರ ಮೇಲಿದೆ. ಈ ನಿಟ್ಟಿನಲ್ಲಿ ಬಾಂಧವರಿಂದ ಉದಾರ ಕೊಡುಗೆಗಳನ್ನು ನಿರೀಕ್ಷಿಸಲಾಗಿದೆ. ಮಾನ್ಯ ಬಾಂಧವರು ತಮ್ಮ ಉದಾರ ಮನಸ್ಸಿನ ಕೊಡುಗೆಗಳನ್ನು ಅಧಿಕ ಸಂಖ್ಯೆಯಲ್ಲಿ ನೀಡಿ ಈ ಔಚಿತ್ಯಪೂರ್ಣ ಕಾರ್ಯದಲ್ಲಿ ಭಾಗಿಗಳಾಗಬೇಕೆಂದು ಕೋರುತ್ತೇವೆ. ಎರಡು ಪ್ರಕಾರದ ದಾನಿಗಳನ್ನು ಗುರುತಿಸಲಾಗುವುದು.

ನಮ್ಮ ಕರೆಗೆ ಓಗೊಟ್ಟು ಈ ತಿಂಗಳು ಸ್ಪಂದಿಸಿದ ಮಾನ್ಯ ಬಾಂಧವರು

| | | |
|---|---|---|
| **ರೇಖಾ ಅರುಣ್** | **ಬೆಂಗಳೂರು** | **ಪೋಷಕಿ** |
| **ಲೀಲಾ ಶ್ರೀಕಂಠಯ್ಯ** | **ಬೆಂಗಳೂರು** | **ಪೋಷಕಿ** |